5

# ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ

*"ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಬಾಪ್ತಿಸ್ಮ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪರಿಶುದ್ಧಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಬಾಪ್ತಿಸ್ಮ ಮಾಡಿಸುವವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನುಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವನು ಎಂದು ಹೇಳಿದನು" (ಮತ್ತಾಯ 3:11, 12).*

"ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ" ಹೊಂದುವ ವಿಚಾರವು ಬೈಬಲಿನಲ್ಲಿ ಕೇವಲ ಐದು ಸಲ ಕಂಡುಬರುತ್ತದೆ: ಮತ್ತಾಯ 3:11; ಮಾರ್ಕ 1:8; ಲೂಕ 3:16; ಅಪೊಸ್ತಲರ ಕೃತ್ಯಗಳು 1:4 ಮತ್ತು 11:16. ಇದು ಹೊಸ ಒಡಂಬಡಿಕೆಯಲ್ಲಿ ಎರಡು ಸಂಭವಗಳಿಗೆ ಮಾತ್ರ ಅನ್ವಯಿಸಲ್ಪಟ್ಟಿದೆ: ಅಪೊಸ್ತಲರ ಬಾಪ್ತಿಸ್ಮ (ಅಪೊಸ್ತಲರ ಕೃತ್ಯಗಳು 1:4, 5) ಮತ್ತು ತನ್ನ ಕುಟುಂಬ ಮತ್ತು ಸ್ನೇಹಿತರೊಂದಿಗೆ ಕೊರ್ನೇಲ್ಯನ ಬಾಪ್ತಿಸ್ಮ (ಅಪೊಸ್ತಲರ ಕೃತ್ಯಗಳು 11:15, 16). ಹೊಸ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮನ ಬಾಪ್ತಿಸ್ಮಕ್ಕೆ ಕೆಲವೇ ಉಲ್ಲೇಖಗಳಿದ್ದರೂ, ಅದು ಇಂದು ಪ್ರತಿಯೊಬ್ಬ ಕ್ರೈಸ್ತನಿಗಾಗಿ ಇರುವದೆಂದು ಕೆಲವರು ಘೋಷಿಸುತ್ತಾರೆ.

ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟ ಬಾಪ್ತಿಸ್ಮದ ಬಗ್ಗೆ ಬೈಬಲ್ ಮಾತಾಡುವದಿಲ್ಲ.[1] ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವನ್ನು ಯೇಸುವು ನಡಿಸಿದನು. ಮತ್ತಾಯ 3:11ರಲ್ಲಿಯ ಯೋಹಾನನ ಮಾತುಗಳಿಂದ ಇದು ಸ್ಪಷ್ಟವಾಗುತ್ತದೆ: "... ಆತನು ಪರಿಶುದ್ಧಾತ್ಮನಲ್ಲಿಯೂ ... ನಿಮಗೆ ಬಾಪ್ತಿಸ್ಮ ಮಾಡಿಸುವವನು ..." ಯೋಹಾನನು ಕೊಟ್ಟ ಬಾಪ್ತಿಸ್ಮದಲ್ಲಿ ನೀರು ಮೂಲ ವಸ್ತುವಾದುದರಿಂದ (ಮತ್ತಾಯ 3:6) ಪರಿಶುದ್ಧಾತ್ಮನು ಯೇಸುವು ಬಾಪ್ತಿಸ್ಮ ಮಾಡಿಸುವ ಮೂಲ ವಸ್ತುವಾಗಿರುವನು (ಅಂದರೆ, "ಮುಳುಗೇಳಿಸುವದಕ್ಕೆ" ಇಲ್ಲವೇ ["overwhelm"]; "ಪೂರ್ತಿ ಮುಳುಗಿಸುವಿಕೆ"). ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟ ಬಾಪ್ತಿಸ್ಮವನ್ನು ಬೋಧಿಸುವವರು ಬಾಪ್ತಿಸ್ಮವನ್ನು ಮಾಡಿಸುತ್ತಿದ್ದಾತನು ಯೇಸುವಾಗಿದ್ದನು ಆದರೆ ಪರಿಶುದ್ಧಾತ್ಮನು ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವದಿಲ್ಲ.

ಯೋಹಾನನು - ನೀರಿನಲ್ಲಿ ಮುಳುಗೇಳಿಸಿದವನು - ಪರಿಶುದ್ಧಾತ್ಮನಲ್ಲಿಯ ಬಾಪ್ತಿಸ್ಮದ ಬಗ್ಗೆ ಮೊದಲು ಹೇಳಿದವನು. ತನಗೆ ಹೋಲಿಸಿ ಯೇಸುವು ಹೇಗೆ ಹೆಚ್ಚು ಶ್ರೇಷ್ಠನು ಎಂದು ಹೇಳಿದಾಗ ಈ ವಿಷಯವನ್ನು ಪರಿಚಯಿಸಿದನು.

ಲೂಕ 3:16ರಲ್ಲಿಯ ಯೋಹಾನನ ಮಾತಿನ ಧಾಟಿಯಂತೆ ಎಲ್ಲಾ ಕ್ರೈಸ್ತರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವನ್ನು ನಿರೀಕ್ಷಿಸಬೇಕೆಂದು ಕೆಲವರು ತೀರ್ಮಾನಿಸಿದ್ದಾರೆ. "ನಾನಂತೂ ನಿಮಗೆ ನೀರಿನ ಬಾಪ್ತಿಸ್ಮ ಮಾಡಿಸುವೆನು; ಆದರೆ ನನಗಿಂತ ಶಕ್ತನು ಬರುತ್ತಾನೆ. ಆತನ ಕೆರಗಳ ಬಾರನ್ನು ಬಿಚ್ಚುವದಕ್ಕೂ ನಾನು ಯೋಗ್ಯನಲ್ಲ; *ಆತನು ಪರಿಶುದ್ಧಾತ್ಮದಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಬಾಪ್ತಿಸ್ಮ ಮಾಡಿಸುವವನು"* (ಒತ್ತಿ

ಹೇಳಿದ್ದು ನನ್ನದ್ದು.)

ಅಂಥ ತೀರ್ಮಾಮಾನವನ್ನು ಕುರಿತು ಎರಡು ಪ್ರಶ್ನೆಗಳು ಕೇಳಲ್ಪಡಬೇಕು: "ಯೋಹಾನನು ಯಾರಿಗೆ ಮಾತಾಡುತ್ತಿದ್ದನು?" ಮತ್ತು "ಅಂಥ ತೀರ್ಮಾನವು ಇತರ ಬೈಬಲ್ ಬೋಧನೆಯೊಂದಿಗೆ ಹೊಂದಿಕೊಂಡು ಹೋಗುವುದು?" ಮೊದಲನೆಯ ಪ್ರಶ್ನೆಗೆ ಉತ್ತರ ಕೊಡಲು, ಯೋಹಾನನ ಹೇಳಿಕೆಯ ಹಿನ್ನೆಲೆಯು ಯೋಚಿಸಲ್ಪಡತಕ್ಕದ್ದು.

ಯೋಹಾನನ್ನು ಕುರಿತು ಲೂಕನು ಬರೆದನು, "ಹೀಗಿರಲಾಗಿ ಅವನು ತನ್ನಿಂದ ಬಾಪ್ತಿಸ್ಮ ಮಾಡಿಸಿಕೊಳ್ಳುವದಕ್ಕಾಗಿ ಹೊರಟುಬಂದ ಜನರ ಗುಂಪಿಗೆ - ಎಲೈ, ಸರ್ಪಜಾತಿಯವರೇ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೂ ಉಪದೇಶ ಮಾಡಿದವರಾರು?" (ಲೂಕ 3:7). ಅದೇ ಹಿನ್ನೆಲೆಯಲ್ಲಿ, ಲೂಕನು, "ಆಗ ಆ ಗುಂಪಿನವರು, - ಹಾಗಾದರೆ ನಾವೇನು ಮಾಡಬೇಕು ಎಂದು ಕೇಳಿದರು" (ಲೂಕ 3:10) ಎಂದು ಬರೆದನು. "... ಆತನು ಪರಿಶುದ್ಧಾತ್ಮನಲ್ಲಿಯೂ ಬೆಂಕಿಯಲ್ಲಿಯೂ ಬಾಪ್ತಿಸ್ಮ ಮಾಡಿಸುವನು" (ಲೂಕಾ 3:16) ಎಂದು ಉತ್ತರ ಕೊಡುತ್ತ ಅವರೆಲ್ಲರಿಗೆ ಹೇಳಿದಾಗ ಯೋಹಾನನು ಜನರ ಗುಂಪಿಗೆ ಮಾತಾಡುತ್ತಿದ್ದನು.

ಜನಸಮೂಹದ ಮಧ್ಯದಲ್ಲಿ "ಸರ್ಪಜಾತಿಯವರು" ಇದ್ದರು (ಲೂಕ 3:7). ಅದರಲ್ಲಿ ಯೋಹಾನನಿಂದ ಬಾಪ್ತಿಸ್ಮ ಮಾಡಿಸಿಕೊಳ್ಳಲಿಕ್ಕೆ ಬಂದಿದ್ದ ಅನೇಕ ಫರಿಸಾಯರೂ ಸದ್ದುಕಾಯರೂ ಇದ್ದರು (ಮತ್ತಾಯ 3:7). ಅವರು ಮಾನಸಾಂತರ ಪಡಯದೆಯಿದ್ದರಿಂದ, ಅವರು "ಬೆಂಕಿಯಲ್ಲಿ ಎಸೆಯಲ್ಪಡುವ" ಗಂಡಾಂತರದಲ್ಲಿ ಇದ್ದರು (ಮತ್ತಾಯ 3:8-10). ನಿಶ್ಚಯವಾಗಿಯೂ ಜನರ ಗುಂಪಿನಲ್ಲಿ ಪರಿಶುದ್ಧಾತ್ಮನನ್ನು ಸ್ವೀಕರಿಸಿದ ಕೆಲವು ಜನರಿದ್ದರು (ಯೋಹಾನ 14:17). "ಆತನು ನಿಮ್ಮಲ್ಲಿ ಎಲ್ಲರನ್ನೂ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸುವನು" ಎಂದು ಯೋಹಾನನು ಹೇಳಲಿಲ್ಲ, "ಆತನು ನಿಮ್ಮನ್ನು ಪರಿಶುದ್ಧಾತ್ಮ ಮತ್ತು ಬೆಂಕಿಯಿಂದ ಬಾಪ್ತಿಸ್ಮ ಮಾಡಿಸುವನು" ಎಂದು ಅವನು ಎಲ್ಲರಿಗೂ ಹೇಳಿದನು.

ಯೋಹಾನನ ಹೇಳಿಕೆಯನ್ನು ಕಾರ್ಖಾನೆಯಲ್ಲಿ ಕೆಲವು ಕೆಲಸಗಳಿಗಾಗಿ ಅರ್ಜಿಹಾಕಲು ಕೂಡಿ ಬಂದ ಜನರ ದೊಡ್ಡಗುಂಪಿಗೆ ಫ್ಯಾಕ್ಟರಿಯ ಪ್ರತಿನಿಧಿಯು ಮಾತಾಡುವದಕ್ಕೆ ಹೋಲಿಸಬಹುದು. ಅವನು ಬಿಲ್ ಜೋನ್ಸನನ್ನು ಪರಿಚಯಿಸಿ, "ಇವರು ಬಿಲ್ ಜೋನ್ಸ್, ನಿಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳುವರು ಇವರು" ಎಂದು ಹೇಳುವನು. ಅಲ್ಲಿದ್ದ ಪ್ರತಿಯೊಬ್ಬರೂ ಕೆಲಸಕ್ಕೆ ತೆಗೆದು ಕೊಳ್ಳಲ್ಪಡುವರು ಎಂದು ಅನ್ವಯವಾಗುವದಿಲ್ಲ. "ಅಲ್ಲಿದ್ದ ಎಲ್ಲರಿಗೆ" ಯಾರೂ ಕೆಲಸಕ್ಕೆ ತೆಗೆದು ಕೊಳ್ಳುವರು ಎಂಬುದನ್ನು ಸೂಚಿಸುತ್ತದೆ, ಇದನ್ನೆ ತಿರುಳಿನಲ್ಲಿ ಯೋಹಾನನು ಮಾಡುತ್ತಿರುವುದು: ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಮಾಡಿಸುವ ಮಹಾ ವ್ಯಕ್ತಿಯನ್ನು ಅವನು ಗುರುತಿಸುತ್ತಿದ್ದಾನೆ. ಅವರೆಲ್ಲರನ್ನೂ ಯೇಸುವು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಮಾಡಿಸುವನೆಂದು ಅವನು ಹೇಳುತ್ತಿರುವದಿಲ್ಲ. ಯಾರು ಪರಿಶುದ್ಧಾತ್ಮನಲ್ಲಿ ಮುಳುಗೇಳಿಸಲ್ಪಡುವರು ಎಂಬುದರ ಮೇಲೆ ಇತರ ಪರಿಶುದ್ಧ ಬರಹಗಳು ಹೆಚ್ಚು ಸ್ಪಷ್ಟವಾಗಿವೆ.

## ಪರಿಶುದ್ಧಾತ್ಮನ ಬಾಪ್ತಿಸ್ಮ ವಾಗ್ದಾನ ಮಾಡಲ್ಪಟ್ಟದ್ದು ಮತ್ತು ನೆರವೇರಿದ್ದು

ಅಪೊಸ್ತಲರ ಕೃತ್ಯಗಳು 1:5ರಲ್ಲಿ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವನ್ನು ವಾಗ್ದಾನ ಮಾಡಿದಾಗ ಯೇಸುವು ಯಾರನ್ನು ಕೂಡಿಸಿದ್ದನು. ಈ ವಾಗ್ದಾನದ ಸಂದರ್ಭದಲ್ಲಿ ಉಪಯೋಗಿಸಿದ ಸರ್ವನಾಮಗಳ ವಿಚಾರವು ಯೇಸುವು ಅಪೊಸ್ತಲರನ್ನು ಮಾತ್ರವೇ

ಕೂಡಿಸಿದ್ದನು ಎಂಬುದನ್ನು ತೋರಿಸುತ್ತದೆ, ಈ ಕೆಳಗಿನ ಉಲ್ಲೇಖದಲ್ಲಿ ಪ್ರತಿಯೊಂದು ಸರ್ವನಾಮದ ನಂತರ "ಅಪೊಸ್ತಲರು" ಎಂಬ ಮಾತು ಅವರು ಮಾತ್ರವೇ ಎಂಬುದನ್ನು ಒತ್ತಿ ಹೇಳಲು ಸೇರಿಸಲ್ಪಟ್ಟಿದೆ.

> ... ತಾನು ಆರಿಸಿಕೊಂಡಿದ್ದ ಅಪೊಸ್ತಲರಿಗೆ ಪರಿಶುದ್ಧಾತ್ಮನ ಮೂಲಕ ಆಜ್ಞೆಕೊಟ್ಟು ಮೇಲಣ ಲೋಕವನ್ನೇರಿದ ದಿನದ ವರೆಗೆ ವಿವರಿಸಿದೆನಷ್ಟೆ. ಆತನು ಬಾಧೆಪಟ್ಟು ಸತ್ತ ಮೇಲೆ ತನ್ನನ್ನು ಜೀವಂತನೆಂದು ... ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು. ... ಅಪೊಸ್ತಲರಿಗೆ ಕಾಣಿಸಿ ಕೊಳ್ಳುತ್ತ ... ಆತನು ಅವರಿಗೆ [ಅಪೊಸ್ತಲರಿಗೆ] "ಯೋಹಾನನಂತೂ ನೀರಿನಲ್ಲಿ ಬಾಪ್ತಿಸ್ಮ ಮಾಡಿಸಿದನು, ನಿಮಗಾದರೋ [ಅಪೊಸ್ತಲರಿಗೆ] ಇನ್ನು ಸ್ವಲ್ಪ ದಿವಸಗಳೊಳಗಾಗಿ ಪರಿಶುದ್ಧಾತ್ಮದಲ್ಲಿ ಬಾಪ್ತಿಸ್ಮವಾಗುವದು. ಆದಕಾರಣ ನೀವು [ಅಪೊಸ್ತಲರು] ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು [ಅಪೊಸ್ತಲರು] ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದು ಕೊಂಡಿರ್ರಿ ಎಂದು ಅಪ್ಪಣೆ ಕೊಟ್ಟನು" (ಅಪೊಸ್ತಲರ ಕೃತ್ಯಗಳು 1:2-5).

"ನೀವು" ಮತ್ತು "ಅವರಿಗೆ" ಎಂಬ ಸರ್ವ ನಾಮಗಳು ವಿಶೇಷವಾಗಿ ವಚನ 2ರಲ್ಲಿ ಸ್ಪಷ್ಟವಾಗಿ ಹೇಳಿದ "ಅಪೊಸ್ತಲರಿಗೆ" ಸಂಬಂಧಿಸಿವೆ.

**ಪರಿಶುದ್ಧಾತ್ಮನ ಬಾಪ್ತಿಸ್ಮ ಮತ್ತು ಅಪೊಸ್ತಲರು**

ಯೇಸುವು ತನ್ನ ವಾಗ್ದಾನವನ್ನು ಮಾಡಿದ ನಂತರ "ಸ್ವಲ್ಪ ದಿನಗಳಲ್ಲಿ" (ಅಪೊಸ್ತಲರ ಕೃತ್ಯಗಳು 1:5) ಅಪೊಸ್ತಲರು ಪರಿಶುದ್ಧಾತ್ಮನನ್ನು ಸ್ವೀಕರಿಸಿದರು. ಪರಿಶುದ್ಧಾತ್ಮನು ಅಪೊಸ್ತಲರಿಗೆ ಮಾತ್ರವೇ ಬಂದನು ಎಂಬುದನ್ನು ಈ ಕೆಳಗಿನ ಪುರಾವೆಯು ತೋರಿಸುತ್ತದೆ (ಅಪೊಸ್ತಲರ ಕೃತ್ಯಗಳು 2:4).

1. ಅಪೊಸ್ತಲರಿಗೆ ಪರಿಶುದ್ಧಾತ್ಮನು ವಾಗ್ದಾನ ಮಾಡಲ್ಪಟ್ಟಿದ್ದನು.

2. ಅಪೊಸ್ತಲರ ಕೃತ್ಯಗಳು 1 ಅಪೊಸ್ತಲರಿಗೆ ಸಂಬಂಧಿಸಿ ಮುಕ್ತಾಯಗೊಳ್ಳುತ್ತದೆ. ಲೂಕನು ಮತ್ತಾಯನನ್ನು ಕುರಿತು, "... ಅವನು ಹನ್ನೊಂದು ಮಂದಿ ಅಪೊಸ್ತಲರ ಸಂಗಡ ಸೇರಿ ಎಣಿಸಲ್ಪಟ್ಟನು" (ಅಪೊಸ್ತಲರ ಕೃತ್ಯಗಳು 1:26) ಎಂದು ಬರೆದಿದ್ದಾನೆ. "ಅವರೆಲ್ಲರು ಒಂದೇ ಸ್ಥಳದಲ್ಲಿ ಕೂಡಿದ್ದರು ... ಆಗ ಅವರೆಲ್ಲರು ಪರಿಶುದ್ಧಾತ್ಮ ಭರಿತರಾಗಿ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು" (ಅಪೊಸ್ತಲರ ಕೃತ್ಯಗಳು 2:1ಬಿ-4; ಒತ್ತಿ ಹೇಳಿದ್ದು ನನ್ನದು) ಎಂದು ಆಮೇಲೆ ಲೂಕ ಹೇಳಿದ್ದಾನೆ. ಪುನಃ ಸರ್ವನಾಮ "ಅವರು" ಎಂಬುದು ಕೊನೆಗೆ ಹೇಳಲ್ಪಟ್ಟ ನಾಮ ಪದ "ಅಪೊಸ್ತಲರು" ಎಂಬುದನ್ನು ಸೂಚಿಸುತ್ತದೆ.

3. ಬೇರೆ ಬೇರೆ ಭಾಷೆಗಳಲ್ಲಿ ಮಾತಾಡುತ್ತಿದ್ದವರು "ಗಲಿಲಾಯದವರು" ಆಗಿದ್ದರು (ಅಪೊಸ್ತಲರ ಕೃತ್ಯಗಳು 2:7). ಈ ಸಂಗತಿಯು ಜನಸಮೂಹವನ್ನು ತೆಗೆದು ಹಾಕುತ್ತದೆ. ಯಾಕಂದರೆ ಅವರು "ಆಕಾಶದ ಕೆಳಗಿರುವ ಎಲ್ಲಾ ದೇಶಗಳಿಂದ" ಬಂದವರಾಗಿದ್ದರು (ಅಪೊಸ್ತಲರ ಕೃತ್ಯಗಳು 2:5; ವಚನಗಳು 8-11 ಸಹ ನೋಡಿರಿ).

4. ಅಪೊಸ್ತಲರು ಗಮನದ ಕೇಂದ್ರವಾಗಿದ್ದರು, ಅವರು ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟವರು ಮತ್ತು ಬೇರೆ ಭಾಷೆಗಳಲ್ಲಿ ಮಾತಾಡುತ್ತಿದ್ದವರು ಎಂಬುದನ್ನು

ಅದು ತೋರಿಸುತ್ತದೆ. "ಆದರೆ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದುನಿಂತು ಘಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು: '... ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ, ...' " (ಅಪೊಸ್ತಲರ ಕೃತ್ಯಗಳು 2:14, 15). ಅಮಲೇರಿದವರು ಎಂದು ದೂಷಿಸಲ್ಪಟ್ಟವರು ಮಾತಾಡುವವರಾಗಿದ್ದರು ಮತ್ತು ಮಾತಾಡುತ್ತಿದ್ದವರು ಪರಿಶುದ್ಧಾತ್ಮನನ್ನು ಸ್ವೀಕರಿಸಿದವರಾಗಿದ್ದರು. ಪೇತ್ರನು ದೂಷಿಸಲ್ಪಟ್ಟ - ಹನ್ನೊಂದು ಜನರೊಂದಿಗೆ ಎದ್ದು ನಿಂತು "ಇವರು ಅಮಲೇರಿದವರಲ್ಲ" ಎಂದು ಹೇಳಿದನು. ಈ ಪುರಾವೆಯು ಅಪೊಸ್ತಲರು ಮಾತ್ರವೇ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದ್ದರೆಂದು ತೋರಿಸುತ್ತದೆ.

5. "ಈ ಯೇಸುವನ್ನೇ ದೇವರು ಎಬ್ಬಿಸಿದನು, ಇದಕ್ಕೆ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ" (ಅಪೊಸ್ತಲರ ಕೃತ್ಯಗಳು 2:32) ಎಂದು ಪೇತ್ರನು ಘೋಷಿಸಿದನು. ಯೇಸುವಿನ ಪುನರುತ್ಥಾನದ ವಿಶೇಷ ಸಾಕ್ಷಿಗಳು ಅಪೊಸ್ತಲರಾಗಿದ್ದರು (ಅಪೊಸ್ತಲರ ಕೃತ್ಯಗಳು 1:22; 4:33; 10:39-42; 13:31; ನೋಡಿರಿ 1:3).

6. ಜನ ಸಮೂಹವು ಅಪೊಸ್ತಲರೊಂದಿಗೆ ಮಾತಾಡಿತು, ಇದು ಆ ಮಾತಾಡುತ್ತಿದ್ದವರು ಅಪೊಸ್ತಲರು ಎಂದು ತೋರಿಸುತ್ತದೆ. "ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ ಸಹೋದರರೇ, ನಾವೇನು ಮಾಡಬೇಕು?" ಎಂದು ಕೇಳಿದರು (ಅಪೊಸ್ತಲರ ಕೃತ್ಯಗಳು 2:37).

7. ಅಪೊಸ್ತಲರು ಜನರ ಬೋಧಕರಾಗಿದ್ದರು (ಅಪೊಸ್ತಲರ ಕೃತ್ಯಗಳು 2:42), ಪರಿಶುದ್ಧಾತ್ಮನ ಮುಖಾಂತರವಾಗಿ ದೇವರ ವಾಕ್ಯವು ಅವರಿಗೆ ಕೊಡಲ್ಪಟ್ಟಿತು ಎಂಬುದನ್ನು ಇದು ತೋರಿಸುತ್ತದೆ (ಯೋಹಾನ 14:26).

8. ಪರಿಶುದ್ಧಾತ್ಮ ಬರುವಿಕೆಯನ್ನು ಅನುಸರಿಸಿ, ಅಪೊಸ್ತಲರು ಸೂಚಕಕಾರ್ಯಗ ಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿದರು. ಕೆಲವು ಸಮಯದವರೆಗೆ ಯೇಸುವಿನಿಂದ ವಾಗ್ದಾನ ಮಾಡಲ್ಪಟ್ಟ ಬಲಪಡಿಸುವ ಶಕ್ತಿಯನ್ನು ಉಪಯೋಗಿಸುವವರಂತೆ ಅಪೊಸ್ತಲರ ಕೃತ್ಯಗಳು 1:8ರಲ್ಲಿ ಅವರು ಮಾತ್ರವೇ ನಮೂದಿಸಲ್ಪಟ್ಟಿದ್ದಾರೆ.

> ಅನೇಕ ಅದ್ಭುತಕಾರ್ಯಗಳೂ ಸೂಚಕಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು (ಅಪೊಸ್ತಲರ ಕೃತ್ಯಗಳು 2:43ಬಿ).
>
> ಮತ್ತು ಕರ್ತನಾದ ಯೇಸು ಜೀವಂತವಾಗಿ ಎದ್ದು ಬಂದನೆಂಬದಕ್ಕೆ ಅಪೊಸ್ತಲರು ಬಹು ಬಲವಾಗಿ ಸಾಕ್ಷಿ ಹೇಳುತ್ತಿದ್ದರು (ಅಪೊಸ್ತಲರ ಕೃತ್ಯಗಳು 4:33ಎ).
>
> ಅಪೊಸ್ತಲರ ಕೈಯಿಂದ ಅನೇಕ ಸೂಚಕ ಕಾರ್ಯಗಳೂ ಜನರಲ್ಲಿ ನಡೆಯುತ್ತಾ ಇದ್ದವು (ಅಪೊಸ್ತಲರ ಕೃತ್ಯಗಳು 5:12ಎ).

ಜನಸಮೂಹವಾಗಲೀ ಇಲ್ಲವೇ ಅಪೊಸ್ತಲರ ಕೃತ್ಯಗಳು 1:15ರಲ್ಲಿಯ 120 ಜನರಾಗಲೀ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿರಲಿಲ್ಲ ಎಂದು ತೀರ್ಮಾನಿಸಲು ಸಾಕಷ್ಟಾದ ಪುರಾ ವೆಯಾಗಿರುತ್ತದೆ. ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವನ್ನು ಯೇಸುವು ಅಪೊಸ್ತಲರಿಗೆ ಮಾತ್ರ ವೇ ವಾಗ್ದಾನ ಮಾಡಿದನು ಮತ್ತು ಅವರು ಮಾತ್ರವೇ ಪಂಚಾಶತ್ತಮ ದಿನದಂದು ಆ ಬಾಪ್ತಿಸ್ಮವನ್ನು ಹೊಂದಿಕೊಂಡರು.

**ಪರಿಶುದ್ಧಾತ್ಮನ ಬಾಪ್ತಿಸ್ಮ ಮತ್ತು ಪ್ರಥಮ ಅನ್ಯ ಕ್ರೈಸ್ತರು**

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಹೊಸ ಒಡಂಬಡಿಕೆಯಲ್ಲಿ ಎರಡು ಸಲ ಕೊಡಲ್ಪಟ್ಟಿದೆ. ಪ್ರಾರಂಭದಲ್ಲಿ ಅಪೊಸ್ತಲರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿದರು. ವರ್ಷಗಳ ನಂತರ, ಕೊರ್ನೇಲ್ಯ ಮತ್ತು ಅವನ ಸ್ನೇಹಿತರು ಹೊಂದಿಕೊಂಡದ್ದಕ್ಕೆ ಹೋಲಿಕೆಯನ್ನು ಕಂಡುಕೊಳ್ಳಲು, ಆ ಸಂದರ್ಭದಲ್ಲಿ ಏನು ಸಂಭವಿಸಿತೆಂಬುದನ್ನು ಹಿಂದಿರುಗಿ ಯೋಚಿಸಲು ಪೇತ್ರನಿಗೆ ಅಗತ್ಯವಾಗಿ ಕಂಡು ಬಂದಿತ್ತು (ಅಪೊಸ್ತಲರ ಕೃತ್ಯಗಳು 11:14-16). ಪಂಚಾಶತ್ತಮ ದಿನದ ಆ ಪ್ರಾರಂಭದ ಘಟನೆಯ ನಂತರ ಬೇರೆ ಇತರ ಯೆಹೂದರಲ್ಲಿ ಯಾವನೂ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದದಿರುವುದು ಸಹಜ ವಾಗಿ ಕಾಣುತ್ತದೆ. ಕೆಲವು ವರ್ಷಗಳ ನಂತರ, ಪೇತ್ರನು ಈ ಎರಡನೆಯ ಘಟನೆಯನ್ನು - ಅನ್ಯಜನಾಂಗದಿಂದ ಮೊದಲು ಮಾರ್ಪಾಟು ಹೊಂದಿದವರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿದಾಗ - ಸುನ್ನತಿಯಿಲ್ಲದೆ ದೇವರು ಅನ್ಯಜನಾಂಗದವರನ್ನು ಸ್ವೀಕರಿಸುವದನ್ನು ಯೆಹೂದೀ ಕ್ರೈಸ್ತರಿಗೆ ರುಜುವಾತು ಪಡಿಸಲು ಉಲ್ಲೇಖಿಸಿದನು (ಅಪೊಸ್ತಲರ ಕೃತ್ಯಗಳು 15:7-9). ಕೊರ್ನೇಲ್ಯನು ಮತ್ತು ಅವನ ಮನೆಯವರು ಬಾಪ್ತಿಸ್ಮ ಹೊಂದಿದಂದಿನಿಂದ, ಬೇರೆ ಯಾವುದೇ ಅನ್ಯನು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಲಿಲ್ಲ ಎಂಬುದನ್ನು ತೋರಿಸುತ್ತದೆ.

ಅನ್ಯಜನರಿಗೆ ರಕ್ಷಣೆಯನ್ನು ಒದಗಿಸುವುದು ತನ್ನ ಆಯ್ಕೆಯಾಗಿದೆ ಆದರೆ ಮಾನವ ತೀರ್ಮಾನ ಆಗಿರುವದಿಲ್ಲವೆಂಬುದನ್ನು ಸಿದ್ಧಪಡಿಸಿ ತೋರಿಸುವದಕ್ಕಾಗಿ, ದೇವರು ಸಾಮಾನ್ಯ ವಿಧಾನವನ್ನು ಮುರಿದು, ಅಸಾಮಾನ್ಯವಾದದ್ದನ್ನು ಮಾಡಿದನು. ಕೊರ್ನೇಲ್ಯನ ಮನೆಯರು ಮಾರ್ಪಟ್ಟಾಗ ದೇವರು ಅನ್ಯಜನರಿಗೆ ಪರಿಶುದ್ಧಾತ್ಮನ ನೆಲೆಗೊಳಿಸುವಿಕೆಯನ್ನು ಕೊಟ್ಟಿದ್ದಲ್ಲದೇ (ಅಪೊಸ್ತಲರ ಕೃತ್ಯಗಳು 10:47; ನೋಡಿರಿ ಅಪೊಸ್ತಲರ ಕೃತ್ಯಗಳು 2:38), ಅದನ್ನು ದಾಟಿ ಮುಂದೆ ಹೋದನು. ಅವರು ಮಾರ್ಪಾಟು ಹೊಂದುವ ಮೊದಲು, ಕ್ರೈಸ್ತತ್ವದ ಪ್ರಾರಂಭದಲ್ಲಿ ಅಪೊಸ್ತಲರಿಗೆ ಆತನು ಕೊಟ್ಟ ಅದೇ ಬಾಪ್ತಿಸ್ಮದೊಂದಿಗೆ ಪರಿಶುದ್ಧಾತ್ಮನಲ್ಲಿ ಅವರಿಗೆ ಬಾಪ್ತಿಸ್ಮ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 10:44; 11:15). ಯೆಹೂದಿ ಕ್ರೈಸ್ತರನ್ನು ಆಶ್ಚರ್ಯಪಡಿಸಲು, ದೇವರು ಇದನ್ನು ಪಾಪಗಳ ಕ್ಷಮಾಪಣೆಗಾಗಿ ಅವರು ಬಾಪ್ತಿಸ್ಮ ಹೊಂದುವ ಮೊದಲು ಮಾಡಿದನು. ಅಪೊಸ್ತಲರ ಮೇಲೆ ಪರಿಶುದ್ಧಾತ್ಮನು ಬಂದ ತರುವಾಯ, ಬಾಪ್ತಿಸ್ಮಕ್ಕಿಂತ ಮೊದಲು ಪರಿಶುದ್ಧಾತ್ಮನು ಕೊಡಲ್ಪಟ್ಟದ್ದು ಇದೊಂದೇ ಸಂದರ್ಭವಾಗಿದೆ. ಅಪೊಸ್ತಲರ ಹೊರತಾಗಿ ಯಾರಾದರೂ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿದ್ದ ದಾಖಲೆ ಇದೊಂದೇ ಆಗಿದೆ.[2]

ನೀರಿನಲ್ಲಿ ಬಾಪ್ತಿಸ್ಮ ಹೊಂದುವ ಮೊದಲು ಯೇಸುವೂ ಸಹ ಪರಿಶುದ್ಧಾತ್ಮನನ್ನು ಸ್ವೀಕರಿಸಿರಲಿಲ್ಲ (ಮತ್ತಾಯ 3:16, 17). ಕೇವಲ ಕೊರ್ನೇಲ್ಯನ ಮನೆಯವರು ಮತ್ತು ಬಹುಶಃ ಅಪೊಸ್ತಲ ಪೌಲನು, ಪಂಚಾಶತ್ತಮ ದಿನದಂದು ಅಪೊಸ್ತಲರು ಸ್ವೀಕರಿಸಿದಂತೆ ಪರಿಶುದ್ಧಾತ್ಮನನ್ನು ಸ್ವೀಕರಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:38; 8:14-18; 19:5, 6). ಕೊರ್ನೇಲ್ಯನ ಮನೆಯವರನ್ನು ನಿಯಮದಂತೆ ತೆಗೆದುಕೊಳ್ಳದೇ ನಿಯಮದ ಹೊರತಾಗಿ ಎಂದು ತೆಗೆದು ಕೊಳ್ಳಬೇಕು, G. R. Beasley-Murray ಪ್ರತಿಧ್ಧ ಪಂಡಿತನು, ಸರಿಯಾಗಿ ಗಮನಿಸಿದ್ದಾನೆ: "ಬಾಪ್ತಿಸ್ಮವಿಲ್ಲದೆ ಪರಿಶುದ್ಧಾತ್ಮನ ವರವನ್ನು ಅಪರೂಪವಾದದ್ದೆಂದು ದೃಷ್ಟಿಸತಕ್ಕದ್ದು, ಅತಿಯಾಗಿ ಮಹತ್ವವುಳ್ಳ ಪರಿಸ್ಥಿತಿಯಲ್ಲಿ ದೈವಿಕ ಪ್ರವೇಶದ ಕಾರಣದಿಂದ, ಅನ್ಯರು ಸುನ್ನತಿ ಮತ್ತು ಯಜ್ಞಾರ್ಪಣೆಯ ಮುಖಾಂತರ ತಮ್ಮ ಅಶುದ್ಧತೆಯನ್ನು ತೆಗೆದು ಹಾಕದೇ ಇರುವಾಗಲೂ

ಬಾಪ್ತಿಸ್ಮದಿಂದ ಸಭೆಯೊಳಗೆ ಸೇರಿಸಿಕೊಳ್ಳಲ್ಪಡಬಹುದು ([ಅಪೊಸ್ತಲರ ಕೃತ್ಯಗಳು] 11:18)."[3]

ಈಗ ಅನ್ಯರಿಗೆ ರಕ್ಷಣೆಯು ಕೊಡಲ್ಪಡಬಹುದು ಎಂಬುದನ್ನು ರುಜುವಾತು ಪಡಿಸಲು ದೇವರು ಈ ಅಪರೂಪವನ್ನು ಉಪಯೋಗಿಸಿದನು. ಪರಿಶುದ್ಧಾತ್ಮನ ಬಾಪ್ತಿಸ್ಮದ ಈ ಅಸಾಮಾನ್ಯವಾದ ನಿದರ್ಶನವು ಒಂದು ಸಂಕೇತದಂತೆ ಉಪಯೋಗಿಸಲ್ಪಟ್ಟಿತು. ಯೆಹೂದ್ಯರ ಮನೋಭಾವನೆಯ ನಿಮಿತ್ತ ಇದು ಅವಶ್ಯವಾಗಿತ್ತು. ಕೊರ್ನೇಲ್ಯನ ಮಾರ್ಪಡಿಸುವಿಕೆಗೆ ನಡಿಸಿದ ಘಟನೆಗಳಿಗಿಂತ ಮೊದಲು, ಪೇತ್ರನು, ಹಾಗೆಯೇ ಇತರ ಯೆಹೂದ್ಯರು ತಾವು ಅನ್ಯರೊಂದಿಗೆ ಸಂಪರ್ಕದಲ್ಲಿರ ಬಾರದೆಂದು ಯೋಚಿಸಿದ್ದರು. "ಯೆಹೂದ್ಯರು ಅನ್ಯಜನರ ಕೂಡ ಹೊಕ್ಕು ಬಳಿಕೆ ಮಾಡುವದು ಯೆಹೂದ್ಯರ ಸಂಪ್ರದಾಯಕ್ಕೆ ವಿರುದ್ಧವಾಗಿದೆ ಎಂದು ನೀವು ಬಲ್ಲಿರಷ್ಟೆ. ನನಗಂತೂ ಯಾವ ಮನುಷ್ಯನನ್ನಾದರೂ ಹೊಲೆಯನು ಇಲ್ಲವೇ ಅಶುದ್ಧನು ಅನ್ನಭಾರದೆಂದು ದೇವರು ತೋರಿಸಿದ್ದಾನೆ" (ಅಪೊಸ್ತಲರ ಕೃತ್ಯಗಳು 10:28) ಎಂದು ಅವನು ಹೇಳಿದನು.

ಅನ್ಯಜನರು ತಮ್ಮೊಂದಿಗೆ ಹೊಕ್ಕುಬಳಿಕೆ ಮಾಡುವ ಮೊದಲು ಸುನ್ನತಿ ಹೊಂದ ಬೇಕೆಂದು ಯೆಹೂದ್ಯರು ಒತ್ತಾಯ ಪಡಿಸಿದರು (ಅಪೊಸ್ತಲರ ಕೃತ್ಯಗಳು 11:3). ಯೆಹೂದ್ಯರು ಮಧ್ಯದಲ್ಲಿ ಅನ್ಯಜನರು ರಕ್ಷಣೆಗೆ ಅಯೋಗ್ಯರು ಎಂದು ತಿಳಿಯಲ್ಪಟ್ಟರು. ಆದುದರಿಂದ ಯೆಹೂದಿ ಕ್ರೈಸ್ತರು ಯೆಹೂದ್ಯರಿಗೆ ಮಾತ್ರವೇ ಸುವಾರ್ತೆಯನ್ನು ಸಾರುತ್ತಿದ್ದರು (ಅಪೊಸ್ತಲರ ಕೃತ್ಯಗಳು 11:19). ಯೆಹೂದ್ಯರಂತೆ ಅನ್ಯಜನರನ್ನೂ ತಾನು ಸ್ವೀಕರಿಸುವೆನೆಂದು ಸಿದ್ಧ ಪಡಿಸಿ ತೋರಿಸಲು ದೇವರು ಬಯಸಿದ್ದನು.

ಅನ್ಯ ಜನರಿಗೆ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸುವದರಿಂದ, ದೇವರು ಪೇತ್ರನಿಗೆ ಮತ್ತು ಆದಿ ಸಭೆಗೆ ನಾಲ್ಕು ವಿವರಣೆಗಳನ್ನು ಮಾಡಿದನು: (1) ಯೆಹೂದಿ ಕ್ರೈಸ್ತರು ಅನ್ಯ ಜನರೊಂದಿಗೆ ಸಂಪರ್ಕವಿಟ್ಟು ಕೊಳ್ಳಬಹುದು; (2) ರಕ್ಷಿಸಲ್ಪಡಲು ನೀರಿನಲ್ಲಿ ಬಾಪ್ತಿಸ್ಮ ಹೊಂದುವದರಿಂದ ಅನ್ಯ ಜನರು ಕ್ರೈಸ್ತರಾಗಬಹುದು; (3) ಸುನ್ನತಿಯಿಲ್ಲದೆ ಅವರು ಹಾಗೆ ಮಾಡಬಹುದು, ಅಂದರೆ ಯೆಹೂದ್ಯರಾಗದೆ ಹಾಗೆ ಮಾಡಬಹುದು; ಮತ್ತು (4) ಅನ್ಯರಿಂದ ಮಾರ್ಪಾಟು ಹೊಂದಿದವರು ದ್ವಿತೀಯ ದರ್ಜೆಯ ಕ್ರೈಸ್ತರಂತೆ ನಡಿಸಿಕೊಳ್ಳಲ್ಪಡಬಾರದು, ಆದರೆ ಯೆಹೂದಿ ಕ್ರೈಸ್ತರಿಂದ ಸಹೋದರರಂತೆ ಸ್ವೀಕರಿಸಲ್ಪಡಬೇಕು. ದೇವರು ಅಪೊಸ್ತಲರನ್ನು ಬಿಟ್ಟು ಬೇರೆ ಯಾರಿಗೂ ಕೊಡದ ಬಾಪ್ತಿಸ್ಮವನ್ನು ಅನ್ಯರಿಗೆ ಕೊಡುವದರಿಂದ, ಅನ್ಯ ಕ್ರೈಸ್ತರು ಯಾವುದೇ ರೀತಿಯಲ್ಲಿ ಕಡಿಮೆಯಾದವರೆಂದು ಯೋಚಿಸಬಾರದೆಂದು ತೋರಿಸಿದನು.

ಸಾಮಾನ್ಯವಾದ ರೀತಿಯಲ್ಲಿ ಪರಿಶುದ್ಧಾತ್ಮನು ಅವರಿಗೆ ಕೊಡಲ್ಪಟ್ಟಿದ್ದರೆ,[4] ಅವರು ಆತ್ಮನನ್ನು ಸ್ವೀಕರಿಸಿಕೊಂಡದ್ದಕ್ಕೆ ಬಾಹ್ಯಪುರಾವೆಯು ಇರುತ್ತಿರಲಿಲ್ಲ. ಆಯ್ಕೆ ಮಾಡುವಾತನು ದೇವರೇ ಎಂಬುದನ್ನು ತೋರಿಸಲು ವಾದಗ್ರಸ್ತವಲ್ಲದ ಪುರಾವೆಯು ಅಗತ್ಯವಾಗುತ್ತಿತ್ತು. ಇತರ ಘಟನೆಗಳಲ್ಲಿಯಂತೆ (ಅಪೊಸ್ತಲರ ಕೃತ್ಯಗಳು 8:14-18; 19:6), ಅಪೊಸ್ತಲನ ಹಸ್ತಗಳ ಮುಖಾಂತರ ಪರಿಶುದ್ಧಾತ್ಮನ ದೃಶ್ಯವಾದ ಸಂಕೇತಗಳು ಅವರಿಗೆ ಕೊಡಲ್ಪಟ್ಟಿದ್ದರೆ, ಆಗ ಆಯ್ಕೆಯು ಮನುಷ್ಯನದಾಗಿತ್ತು, ದೇವರದಾಗಿರಲಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತಿತ್ತು.

ದೇವರು ಐಗುಪ್ತದಲ್ಲಿ ಮಹತ್ಕಾರ್ಯಗಳನ್ನು ಮಾಡಿದಾಗ (ವಿಮೋಚನಕಾಂಡ 10:2) ಮತ್ತು ಯೇಸುವು ತನ್ನನ್ನು ದೇವರ ಕುಮಾರನಂತೆ ಗುರುತಿಸಿಕೊಳ್ಳುವಂತೆ ಅದ್ಭುತಕಾರ್ಯಗಳನ್ನು ಉಪಯೋಗಿಸಿದಾಗ ಸೃಷ್ಟಿಯ ನಿಯಮಗಳಿಗೆ ಅಪರೂಪತೆ

ಗಳನ್ನು ಉಪಯೋಗಿಸಿದಂತೆ ಈ ಅಪರೂಪತೆಯನ್ನು ದೇವರು ಉಪಯೋಗಿಸಿದನು (ಯೋಹಾನ 20:30, 31). ಕೊರ್ನೇಲ್ಯನ ಮನೆಯಲ್ಲಿಯ ಪ್ರದರ್ಶಿಸುವಿಕೆಯು ಪೇತ್ರನಲ್ಲಿ ಆದರೆ ದೇವರು ತಾನೇ ಸುವಾರ್ತೆಯ ಮುಖಾಂತರ ಅನ್ಯಜನರಿಗೆ ಕ್ಷಮಾಪಣೆಯನ್ನು ಕೊಡುತ್ತಿದ್ದಾನೆಂಬುದನ್ನು ತೋರಿಸಿತು.

ಪರಿಶುದ್ಧಾತ್ಮನಲ್ಲಿಯ ಈ ಬಾಪ್ತಿಸ್ಮವು ರಕ್ಷಣೆಗಾಗಿ ಮತ್ತು ಕ್ರಿಸ್ತನ ದೇಹದಲ್ಲಿ ಸದಸ್ಯತ್ವಕ್ಕಾಗಿ ಅನ್ಯಜನರನ್ನು ಸ್ವೀಕರಿಸುವದಕ್ಕೆ ದೇವರು ಆಯ್ಕೆ ಮಾಡುತ್ತಿದ್ದನು ಎಂಬುದನ್ನು ಪೇತ್ರನಿಗೆ ರುಜುವಾತುಪಡಿಸಿತು. ಅವರು ಯೆಹೂದಿ ಕ್ರೈಸ್ತರೊಂದಿಗೆ ಸಮನಾಗಿ ಯೋಚಿಸಲ್ಪಡತಕ್ಕದ್ದು. ಘಟನೆಗಳ ಒಂದು ಕುತೂಹಲಕರವಾದ ಸರಣಿಯಿಂದ ಪೇತ್ರನು ಪ್ರಗತಿಪರವಾಗಿ ಈ ಅಂತಿಮ ನಿರ್ಣಯಕ್ಕೆ ನಡಿಸಲ್ಪಟ್ಟನು. ಮೊದಲಾಗಿ, ದೇವರು ಅವನಿಗೆ ಒಂದು ದರ್ಶನದಲ್ಲಿ ವಿವಿಧ ರೀತಿಯ ಪ್ರಾಣಿಗಳನ್ನು ಕೊಯ್ದು ತಿನ್ನಬೇಕೆಂದು ಮೂರು ಸಾರಿ ಹೇಳಿದನು (ಅಪೊಸ್ತಲರ ಕೃತ್ಯಗಳು 10:16). ಅನಂತರ ಅವನು ಆ ದರ್ಶನದ ಮೇಲೆ ಧ್ಯಾನಮಾಡುತ್ತಿದ್ದಾಗ, ಅನ್ಯ ಜನರೊಂದಿಗೆ "ಯಾವ ಸಂಶಯವಿಲ್ಲದೆ" ಹೋಗಬೇಕೆಂದು ಪರಿಶುದ್ಧಾತ್ಮನು ಅವನಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 10:20). ಅಂತಿಮವಾಗಿ, "ಯಾವ ಮನುಷ್ಯನನ್ನಾದರೂ ಹೊಲೆಯನು ಇಲ್ಲವೇ ಅಶುದ್ಧನು ಎಂದು ಕರೆಯಬಾರದೆಂಬ" ತೀರ್ಮಾನಕ್ಕೆ ಪೇತ್ರನು ಬಂದನು (ಅಪೊಸ್ತಲರ ಕೃತ್ಯಗಳು 10:28). "ದೇವರು ಪಕ್ಷಪಾತಿಯಲ್ಲ, ಯಾವ ಜನರಲ್ಲಿಯಾದರೂ ದೇವರಿಗೆ ಭಯಪಟ್ಟು ನೀತಿಯನ್ನು ನಡಿಸುವವರು ಆತನಿಗೆ ಮೆಚ್ಚಿಕೆಯಾಗಿದ್ದಾರೆ" ಎಂದು ಅವನು ನಂಬಿದನು (ಅಪೊಸ್ತಲರ ಕೃತ್ಯಗಳು 10:35).

ಈ ಹಂತದಲ್ಲಿಯೂ ಪೇತ್ರನಿಗೆ ಹೆಚ್ಚು ರುಜುವಾತು ಬೇಕಾಗಿತ್ತು. ಅನ್ಯ ಜನರನ್ನು ಸಾಮಾನ್ಯರು ಇಲ್ಲವೇ ಅಶುದ್ಧರು ಎಂದು ಯೋಚಿಸುವದನ್ನು ನಿಲ್ಲಿಸಬೇಕಾಗಿತ್ತು ಅಷ್ಟೇ ಅಲ್ಲ, ಅವನು ಅವರಿಗೆ ರಕ್ಷಣೆಯನ್ನು ಕೊಡಬೇಕಾಗಿತ್ತು ಮತ್ತು ಅವರನ್ನು ಸಹೋದರರಂತೆ ಸ್ವೀಕರಿಸಬೇಕಾಗಿತ್ತು. ಪೇತ್ರನನ್ನೂ ಇತರ ಯೆಹೂದಿ ವಿಶ್ವಾಸಿಗಳನ್ನೂ ಅನ್ಯ ಜನರನ್ನು ರಕ್ಷಣೆಗೆ ಯೋಗ್ಯರೆಂದು ಸ್ವೀಕರಿಸಲಿಕ್ಕೆ ನಡಿಸುವದಕ್ಕಾಗಿ ಇನ್ನೊಂದು ಅದ್ಭುತಕಾರ್ಯದ ಅಗತ್ಯತೆ ಇತ್ತು. ಹೀಗೆ ದೇವರು ಅನ್ಯಜನರಿಗೆ ಪರಿಶುದ್ಧಾತ್ಮನ ಬಾಪ್ತಿಸ್ಮದ ಮುಖಾಂತರ ಬೇರೆ ಬೇರೆ ಭಾಷೆಗಳಲ್ಲಿ ಮಾತಾಡಲು ಬಲವನ್ನು ಕೊಟ್ಟನು. ಆಗ ಪೇತ್ರನು, "ನಮ್ಮ ಹಾಗೆಯೇ, ಪರಿಶುದ್ಧಾತ್ಮ ವರವನ್ನು ಹೊಂದಿದ ಇವರಿಗೆ ನೀರಿನ ಬಾಪ್ತಿಸ್ಮವಾಗದಂತೆ - ಯಾರಾದರೂ ಅಭ್ಯಂತರ ಮಾಡಾರೇ?" ಎಂದು ಪ್ರಶ್ನಿಸಿದನು (ಅಪೊಸ್ತಲರ ಕೃತ್ಯಗಳು 10:47). ಅವನ ಅರ್ಥವು ಸ್ಪಷ್ಟವಾಗಿತ್ತು: ದೇವರು ಆಯ್ದುಕೊಂಡದ್ದನ್ನು ಮನುಷ್ಯನು ನಿರಾಕರಿಸಲಾರನು.

ಗಾರೆತ್ ಎಲ್. ರೀಜ ಚೆನ್ನಾಗಿ ಗಮನಿಸಿದ್ದಾರೆ, "ಕೊರ್ನೇಲ್ಯನ ಮತ್ತು ಅವನ ಸ್ನೇಹಿತರ ಮೇಲೆ ಸುರಿಸಲ್ಪಟ್ಟಿದ್ದು ಪಂಚಾಶತ್ತಮ ದಿನದಂದು ಅಪೊಸ್ತಲರಿಗೆ ಸಂಭವಿಸಿದ ಸಂಗತಿಯೇ ಆಗಿದೆಯೆಂದು ಪೇತ್ರನು ಗುರುತಿಸಿದನು."[5] "ದೇವರು ಕರ್ತನಾಗಿರು ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ನಮಗೆ ಕೊಟ್ಟ ವರಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿರಲಾಗಿ ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ?" ಎಂದು ತೀರ್ಮಾನಿಸಿದನು. (ಅಪೊಸ್ತಲರ ಕೃತ್ಯಗಳು 11:17). ಪರಿಶುದ್ಧಾತ್ಮನಲ್ಲಿ ಅನ್ಯಜನರ ಬಾಪ್ತಿಸ್ಮವು ಮನುಷ್ಯನಲ್ಲ, ಆದರೆ ದೇವರು ಮಾಡಿದ ಆಯ್ಕೆಯಾಗಿತ್ತೆಂದು ಪೇತ್ರನಿಗೆ ಸ್ಪಷ್ಟಪಡಿಸಲ್ಪಟ್ಟಿತು. ಈ ರುಜುವಾತು ಪೇತ್ರನಿಗೂ ನಂಬಿದ್ದ ಯೆಹೂದ್ಯರಿಗೂ ಮಾತ್ರವೇ ಆಗಿರದೇ ಅದು ಪ್ರತಿಯೊಂದು ಮುಂಬರುವ ಸಂತತಿಯವರಿಗಾಗಿಯೂ

ಇತ್ತು. ಸುನ್ನತಿಯಿಲ್ಲದೆ ಹಾಗೂ ಅವರು ಧರ್ಮಶಾಸ್ತ್ರವನ್ನು ಕೈಕೊಳ್ಳದೇ ಅನ್ಯಜನರನ್ನು ಸ್ವೀಕರಿಸುವೆನೆಂದು ದೇವರು ಒಂದು ಸಲ ಸಿದ್ಧಪಡಿಸಿ ತೋರಿಸಿದ್ದಾನೆ - ಅದನ್ನು ಇನ್ನೊಂದೂ ಸಲ ಸಿದ್ಧಪಡಿಸಿ ತೋರಿಸುವ ಅಗತ್ಯತೆ ಇರುವದಿಲ್ಲ (ಅಪೊಸ್ತಲರ ಕೃತ್ಯಗಳು 11:3; 15:1, 7-9).

ಫ್ರೆಡರಿಕೆ ಡೇಲ ಬ್ರುನ್ನರ ಅವರು ಅಪೊಸ್ತಲರ ಕೃತ್ಯಗಳು 11ರಲ್ಲಿಯ ಪೇತ್ರನ ಹೇಳಿಕೆಯನ್ನು ಕುರಿತು ಹೀಗೆ ಬರೆದಿದ್ದಾರೆ: " 'ಮೊದಲು ಪರಿಶುದ್ಧಾತ್ಮ ವರವು ನಮ್ಮ ಮೇಲೆ ಬಂದಹಾಗೆ' (ವಚನ 15) ಪರಿಶುದ್ಧಾತ್ಮನು [ಕೊರ್ನೇಲ್ಯನ] ಮನೆಯವರ ಮೇಲೆ ಬಂದದ್ದನ್ನು ಅವನು ಒತ್ತಿ ಹೇಳುತ್ತಾನೆ. 'ಪ್ರತಿಯೊಬ್ಬರೊಂದಿಗೆ ಆತನು ಯಾವಾಗಲೂ ಮಾಡಿದಂತೆ' ಪರಿಶುದ್ಧಾತ್ಮನು ಕೊರ್ನೇಲ್ಯನ ಮನೆಯವರ ಮೇಲೆ ಬಂದನು ಎಂದು ಪೇತ್ರನು ಹೇಳುವದಿಲ್ಲ."[6]

ಅರ್ಥವು ಸ್ಪಷ್ಟವಾಗಿದೆ. ಪಂಚಾಶತ್ತಮ ದಿನದಿಂದ ಪರಿಶುದ್ಧಾತ್ಮನಲ್ಲಿ ಬೇರೆ ಯಾರನ್ನು ದೇವರು ಬಾಪ್ತಿಸ್ಮ ಮಾಡಿಸಲಿಲ್ಲ (ಪೌಲನು ಎಣಿಸಲ್ಪಡದಿದ್ದರೆ), ಅಪೊಸ್ತಲರು ಮೊದಲಿಗರು, "ಪ್ರಾರಂಭದಲ್ಲಿ"ಯವರು; ಮತ್ತು ಕೊರ್ನೇಲ್ಯನ ಮನೆಯವರ ವರೆಗೆ ಅವರು ಕೊನೆಯವರು ಹಾಗೂ ಆ ರೀತಿಯಲ್ಲಿ ಬಾಪ್ತಿಸ್ಮ ಹೊಂದಿದವರು ಮಾತ್ರ. ಪ್ರಾರಂಭದಲ್ಲಿ ಕ್ರೈಸ್ತರಾಗಲು ಯೆಹೂದ್ಯರಿಗೆ ಬಾಗಿಲು ತೆರೆದ ಅದೇ ಘಟನೆಯು ಕೊನೆಗೆ ಅನ್ಯಜನರಿಗಾಗಿ ಬಾಗಿಲು ತೆರೆಯಿತು. ಒಂದೇ ರೀತಿಯಲ್ಲಿ ಯೆಹೂದ್ಯರಿಗೂ ಅನ್ಯಜನರಿಗೂ ಬಾಗಿಲನ್ನು ತೆರೆಯುವದರಿಂದ, ಕ್ರೈಸ್ತರಾಗುವ ಯೆಹೂದ್ಯರಿಗೂ ಅನ್ಯ ಜನರಿಗೂ ತನ್ನೊಂದಿಗೆ ಸಮಾನ ಸ್ಥಾನವಿದೆಯೆಂದು ದೇವರು ಉದಾಹರಣೆ ತೋರಿಸಿದನು.

ಈ ಘಟನೆಯನ್ನು ಪೇತ್ರನು ಕ್ರೈಸ್ತರಾದ ಸುನ್ನತಿಯಿಲ್ಲದ ಅನ್ಯಜನರ ಸ್ಥಿತಿಯನ್ನು ಕುರಿತು ಬಂದ ಪ್ರಶ್ನೆಗಳಿಗೆ ಉತ್ತರ ಕೊಡಲು ಉಪಯೋಗಿಸಿದನು. "ಸಹೋದರರೇ, ಅನ್ಯಜನರು ನನ್ನ ಬಾಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ ನಂಬಬೇಕೆಂದು ದೇವರು ಬಹಳ ದಿವಸಗಳ ಕೆಳಗೆ ನಿಮ್ಮೊಳಗಿಂದ ನನ್ನನ್ನು ಆರಿಸಿಕೊಂಡದ್ದು ನಿಮಗೇ ತಿಳಿದದೆ. ಮತ್ತು ಹೃದಯವನ್ನು ಬಲ್ಲವನಾಗಿರುವ ದೇವರು ಹೀಗೆ ದಯಪಾಲಿಸಿ ಅವರನ್ನು ತನ್ನ ಜನರೆಂದು ಸಾಕ್ಷಿಕೊಟ್ಟನು" (ಅಪೊಸ್ತಲರ ಕೃತ್ಯಗಳು 15:7, 8). ಪರಿಶುದ್ಧಾತ್ಮನ ಬಾಪ್ತಿಸ್ಮವು ಮುಂದುವರಿಯುವ ಘಟನೆಯಲ್ಲ ಎಂಬುದಕ್ಕೆ ಇದು ಸೂಚನೆಯಾಗಿದೆ.

ಇನ್ನೊಂದು ಸಂಗತಿಯು ಸ್ಪಷ್ಟವಾಗುತ್ತದೆ. ಪಾಪಿಗಳ ಕ್ಷಮಾಪಣೆಗಾಗಿ ದೇವರ ಅಗತ್ಯತೆಯು ಯೆಹೂದ್ಯರಿಗೂ ಅನ್ಯಜನರಿಗೂ ಒಂದೇಯಾಗಿರುತ್ತದೆ. ಕೊರ್ನೇಲ್ಯನು ರಕ್ಷಿಸಲ್ಪಡಬೇಕಾದಂಥ ಪದಗಳಿಂದ ಅವನಿಗೆ ಪೇತ್ರನು ಮಾತಾಡಬೇಕಾಗಿತ್ತು (ಅಪೊಸ್ತಲರ ಕೃತ್ಯಗಳು 11:14). ಪರಿಶುದ್ಧಾತ್ಮನ ಬಗ್ಗೆ ಪೇತ್ರನು ಏನನ್ನೂ ಹೇಳಲಿಲ್ಲ ಆದರೆ ನಂಬಬೇಕು ಮತ್ತು ಬಾಪ್ತಿಸ್ಮ ಹೊಂದ ಬೇಕೆಂದು ಅವನು ಕೊರ್ನೇಲ್ಯನಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 10:43, 47, 48). ಈ ಕಾರ್ಯಗಳು ರಕ್ಷಣೆಯನ್ನು ತರುವವು ಎಂದು ಯೇಸು ಹೇಳಿದನು: "ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 16:16ಎ). "... ದೇವರ ಕಡೆಗೆ ತಿರಿಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38ಎ) ಎಂದು ಪೇತ್ರನು ಯೆಹೂದ್ಯರಿಗೆ ಹೇಳಿದ್ದನು. ಅದೇ ರೀತಿಯಲ್ಲಿ "ಅವನು (ಅನ್ಯಜನರಿಗೆ) ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 10:48ಎ) ಎಂದು ಆಜ್ಞಾಪಿಸಿದ್ದನು. ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ನೀರಿನ

ಬಾಪ್ತಿಸ್ಮಕ್ಕೆ ಯಾವುದೇ ಪರ್ಯಾಯವಾಗಿರುವದಿಲ್ಲ. ಆದರೆ ಕೊರ್ನೆಲ್ಯನಿಗೂ ಅವನ ಅನ್ಯಜನರ ಮನೆಯವರಿಗೂ ನೀರಿನ ಬಾಪ್ತಿಸ್ಮ ಹೊಂದಬೇಕೆಂದು ಆಜ್ಞಾಪಿಸುವುದು ಪೇತ್ರನ ಕಾರ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 10:43, 47, 48).

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ರಕ್ಷಣೆಯನ್ನು ತೋರಿಸಲು ಒಂದು ವರವಾಗಿರಲಿಲ್ಲ. ರಕ್ಷಣೆಯನ್ನಲ್ಲ, ಅವರಿಗೆ ಬಲವನ್ನು ಕೊಡುವದಕ್ಕಾಗಿ (ಅಪೊಸ್ತಲರ ಕೃತ್ಯಗಳು 1:8) ಅಪೊಸ್ತಲರು ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯಗಳು 1:4, 5; 2:4). ಬಾಪ್ತಿಸ್ಮ ಮಾಡಿಸುತ್ತಿದ್ದ ಯೋಹಾನನಿಗೆ ಪರಿಶುದ್ಧಾತ್ಮನು ಅವನ ತಾಯಿಯ ಗರ್ಭದಿಂದ ಕೊಡಲ್ಪಟ್ಟನು (ಲೂಕ 1:15). ಇದು ಅವನ ರಕ್ಷಣೆಗಾಗಿ ಇದ್ದಿರಲಿಲ್ಲ, ಆದರೆ ದೇವರು ಅವನನ್ನು ವಿಶೇಷವಾದ ಕಾರ್ಯಕ್ಕಾಗಿ ಆಯ್ದುಕೊಂಡಿದ್ದನು ಎಂಬುದಕ್ಕೆ ಸೂಚನೆಯಾಗಿತ್ತು. ರಕ್ಷಣೆಯನ್ನು ಸ್ವೀಕರಿಸುವದಕ್ಕಾಗಿ ಪರಿಶುದ್ಧಾತ್ಮನು ಎಂದಾದರೂ ಕೊಡಲ್ಪಟ್ಟನು ಎಂಬ ಯಾವುದೇ ಸೂಚನೆಯನ್ನು ಹೊಸ ಒಡಂಬಡಿಕೆಯು ಒಳಗೊಂಡಿರುವದಿಲ್ಲ. ಮಕ್ಕಳಾಗಿರುವವರಿಗೆ ಆತನು ಕೊಡಲ್ಪಟ್ಟಿದ್ದಾನೆ (ಗಲಾತ್ಯ 4:6) ಆದರೆ ಜನರನ್ನು ದೇವರ ಮಕ್ಕಳನ್ನಾಗಿ ಮಾಡುವದಕ್ಕಲ್ಲ.

ಯೂದಾಯದಲ್ಲಿ ಯೆಹೂದಿ ಕ್ರೈಸ್ತರಿಗೆ ಅನ್ಯ ಜನರನ್ನು ಕುರಿತು ದೊರೆತ ವರದಿಯು ಅವರು ದೇವರ ವಾಕ್ಯವನ್ನು ಸ್ವೀಕರಿಸಿದರು ಎಂಬುದು (ಅಪೊಸ್ತಲರ ಕೃತ್ಯ ಗಳು 11:1). ವಾಕ್ಯ ವನ್ನು ಸ್ವೀಕರಿಸುವದರಲ್ಲಿ ಅನ್ಯಜನರು ಪ್ರತಿಕ್ರಿಯೆಯು ಪಂಚಾಶತ್ತಮ ದಿನದಂದು ಮೂರು ಸಾವಿರ ಜನ ಯೆಹೂದ್ಯರ ಪ್ರತಿಕ್ರಿಯೆಯಂತೆಯೇ ಇತ್ತು. "ಅವನ ಮಾತಿಗೆ ಒಪ್ಪಿಕೊಂಡವರು ಬಾಪ್ತಿಸ್ಮ ಮಾಡಿಸಿಕೊಂಡರು" (ಅಪೊಸ್ತಲರ ಕೃತ್ಯಗಳು 2:41ಎ). ಅವರು ಸಂತೋಷದಿಂದ ಸ್ವೀಕರಿಸಿದ ಪೇತ್ರನ ಹೇಳಿಕೆಯು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿ ಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38ಎ). ಅನ್ಯಜನಾಂಗದವರು ಪೇತ್ರನಿಂದ ಅದೇ ಸಂದೇಶವನ್ನು ಹೊಂದಿಕೊಂಡರು.

ರಕ್ಷಿಸಲ್ಪಡಲು ಅವರು ಮಾಡಿದ್ದು ವಿಧಾನವನ್ನು ಅನುಸರಿಸಿದ್ದು: ಅವರು ವಾಕ್ಯ ವನ್ನು ಕೇಳಿದರು, ಯೇಸುವಿನ ಹೆಸರಿನಲ್ಲಿ ನಂಬಿದರು, ಮಾನಸಾಂತರ ಪಟ್ಟರು ಮತ್ತು ಬಾಪ್ತಿಸ್ಮ ಹೊಂದಿದರು, ಬೈಬಲಿನಲ್ಲಿಯ ಇತರ ವಾಕ್ಯಗಳು ಅದೇ ವಿಧಾನವನ್ನು ತೋರಿಸುತ್ತವೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; 22:16; ಕೊಲೊಸ್ಸೆ 2:12, 13; 1 ಪೇತ್ರ 3:21). ಈ ಅನ್ಯಜನರಲ್ಲಿ ವಿಭಿನ್ನವಾದದ್ದು ಅವರು ಪರಿಶುದ್ಧಾತ್ಮ ನಲ್ಲಿ ಬಾಪ್ತಿಸ್ಮ ಹೊಂದಿದ್ದು.

ಈ ಪ್ರಥಮ ಅನ್ಯಜನರನ್ನು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಮಾಡಿಸಿದರಿಂದ, ಅನ್ಯಜನರನ್ನು ಸ್ವೀಕರಿಸುವ ತನ್ನ ಆಯ್ಕೆಯನ್ನು ತೋರಿಸಿದನು. ಅದಲ್ಲದೆ, ಅನ್ಯಜನರು ಕ್ಷಮಿಸಲ್ಪಡುವ ಮೊದಲು ಅವರಿಂದ ಏನು ಕೇಳಲ್ಪಡುವುದು ಎಂಬುದನ್ನು ಕುರಿತು ಅವರಿಗೆ ಭಿನ್ನತೆಯಿರುವದಿಲ್ಲ ಎಂದು ಆತನು ತೋರಿಸಿದನು (ಒಂದೇ ವ್ಯತ್ಯಾಸವು ಅನ್ಯಜನರಿಂದ ಮಾರ್ಪಾಟಾದವರನ್ನು ಸ್ವೀಕರಿಸಲಿಕ್ಕೆ ಆತನ ಆಯ್ಕೆಯನ್ನು ಪ್ರಕಟಿಸಲು ದೇವರು ಉಪಯೋಗಿಸಿದ ಪರಿಶುದ್ಧಾತ್ಮನ ಬಾಪ್ತಿಸ್ಮವಾಗಿತ್ತು.) ಅವರು ಸುವಾರ್ತೆಯನ್ನು (ಅಪೊಸ್ತಲರ ಕೃತ್ಯಗಳು 15:7), ಅವರು ರಕ್ಷಿಸಲ್ಪಡುವಂಥ ವಾಕ್ಯ ವನ್ನು (ಅಪೊಸ್ತಲರ ಕೃತ್ಯಗಳು 11:14; ರೋಮಾಪುರ 1:16; ಎಫೆಸ 1:13) ಸ್ವೀಕರಿಸ ಬೇಕಾಗಿತ್ತು. ಅವರು ಆಗಲೇ ರಕ್ಷಿಸಲ್ಪಟ್ಟಿದ್ದಾರೆ ಎಂಬುದನ್ನು ತೋರಿಸುವದಕ್ಕಲ್ಲ, ಆದರೆ

ಸುವಾರ್ತೆಯ ಮುಖಾಂತರ ಅವರಿಗೆ ರಕ್ಷಣೆಯು ಕೊಡಲ್ಪಡುವುದೆಂದು ತೋರಿಸಲು ಪರಿಶುದ್ಧಾತ್ಮನು ಕೊಡಲ್ಪಟ್ಟನು (ಅಪೊಸ್ತಲರ ಕೃತ್ಯಗಳು 15:7-9). ಪೇತ್ರನಲ್ಲ ಆದರೆ ದೇವರು ತಾನು ಅನ್ಯರಿಗೆ ರಕ್ಷಣೆಯ ಬಾಗಿಲನ್ನು ತೆರೆಯುತ್ತಿರುವನೆಂದು ಸಿದ್ಧಪಡಿಸಿ ತೋರಿಸಲು ಮಾತ್ರವೇ ಕೊರ್ನೇಲ್ಯ ವಿಷಯದಲ್ಲಿ ಸಾಮಾನ್ಯ ನಿಯಮವನ್ನು ಬಿಟ್ಟು ಬೇರೆ ಮಾರ್ಗ ಹಿಡಿದನು (ಯೋಹಾನ 14:17).

ಮಾರ್ಪಾಟುಗೊಂಡ ಈ ಪ್ರಥಮ ಅನ್ಯಜನರ ಮುಖಾಂತರ, ದೇವರು ಪ್ರತಿಯೊಂದು ದೇಶದ ಜನರು ತಾವು ನೀರಿನ ಬಾಪ್ತಿಸ್ಮ ಹೊಂದುವಾಗ ಯೇಸುವಿನ ಮುಖಾಂತರ ರಕ್ಷಣೆ ಪಡಕೊಳ್ಳುವರೆಂದು ಪ್ರದರ್ಶಿಸಿದನು. ಅನ್ಯಜನರಿಗೆ ಬಾಗಿಲನ್ನು ತೆರೆಯುವದರಲ್ಲಿ, ಬಾಪ್ತಿಸ್ಮವು ರಕ್ಷಣೆಗೆ ಅಗತ್ಯವಾದದ್ದಲ್ಲ ಎಂಬ ಹೇಳಿಕೆಯನ್ನು ಕೊಡಲಿಲ್ಲ, ಆದರೆ ಅದರ ಮಹತ್ವವನ್ನು ಒತ್ತಿ ಹೇಳಿದನು (ಅಪೊಸ್ತಲರ ಕೃತ್ಯಗಳು 10:47, 48).

## ಹೊಸ ಒಡಂಬಡಿಕೆಯಿಂದ ಒಂದು ಬಾಪ್ತಿಸ್ಮ ಆಜ್ಞಾಪಿಸಲ್ಪಟ್ಟಿದೆ

ಹೊಸ ಒಡಂಬಡಿಕೆಯಲ್ಲಿ ಹಲವಾರು "ಬಾಪ್ತಿಸ್ಮ"ಗಳು ನಮೂದಿಸಲ್ಪಟ್ಟಿದ್ದರೂ, ಎಲ್ಲಾ ಜನರಿಗೆ ಸಾಮಾನ್ಯವಾಗಿರುವಂತೆ ಒಂದೇ ಒಂದು ಬಾಪ್ತಿಸ್ಮವು ಎಫೆಸ 4:5ರಲ್ಲಿ ಪೌಲನಿಂದ ಗುರುತಿಸಲ್ಪಟ್ಟಿದೆ. ಎಫೆಸದಲ್ಲಿ ಯೋಹಾನನ ಬಾಪ್ತಿಸ್ಮವು ಇನ್ನು ಮುಂದೆ ಅನ್ವಯಿಸಲ್ಪಡುವದಿಲ್ಲ ಎಂಬುದು ತೋರಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 19:1-5). ಮೋಶೆಯೊಳಗೆ ಇಸ್ರಾಯೇಲಿನ ಬಾಪ್ತಿಸ್ಮವು (1 ಕೊರಿಂಥ 10:2) ನಿಶ್ಚಯವಾಗಿಯೂ ಇಂದಿನ ಜನರಿಗಾಗಿರುವದಿಲ್ಲ. ಯೇಸುವು ಆಗಲೇ ಶ್ರಮೆಯ ಬಾಪ್ತಿಸ್ಮವನ್ನು ಸಹಿಸಿದನು (ಲೂಕ 12:50 ನೋಡಿರಿ ಮಾರ್ಕ 10:38, 39). ಶಿಕ್ಷೆಗಾಗಿ ಬೆಂಕಿಯ ಬಾಪ್ತಿಸ್ಮವು ಭವಿಷ್ಯದಲ್ಲಿ ಬರಲಿದೆ (ಮತ್ತಾಯ 3:10-12). ಈ ಬಾಪ್ತಿಸ್ಮಗಳಲ್ಲಿ ಯಾವುದೂ ಪೌಲನ ಮನಸ್ಸಿನಲ್ಲಿ ಇರಲಿಲ್ಲ. ಕ್ರೈಸ್ತರಲ್ಲಿ ಸಾಮಾನ್ಯವಾಗಿದ್ದ ಬಾಪ್ತಿಸ್ಮವು ನೀರಿನಲ್ಲಿಯ ಬಾಪ್ತಿಸ್ಮವು (ಮತ್ತಾಯ 28:19). ಯಾಕಂದರೆ ನೀರಿನ ಬಾಪ್ತಿಸ್ಮದಿಂದ ನಾವು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದ್ದೇವೆ. ನೀರಿನ ಬಾಪ್ತಿಸ್ಮದಲ್ಲಿ, ಎಲ್ಲಾ ಜನರು ಒಂದಾಗುವರು (ಗಲಾತ್ಯ 3:27, 28). ಎಫೆಸದವರಿಗೆ ಪೌಲನು ಬರೆದಾಗ ರೂಢಿಯಲ್ಲಿದ್ದ ಬಾಪ್ತಿಸ್ಮವು ನೀರಿನ ಬಾಪ್ತಿಸ್ಮವಾಗಿತ್ತು.

### ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವಲ್ಲ

"ನಾವೆಲ್ಲರೂ ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮದಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು" ಎಂಬ 1 ಕೊರಿಂಥದಲ್ಲಿಯ 12:13ರಲ್ಲಿಯ ಪೌಲನ ಹೇಳಿಕೆಯ ಕಾರಣದಿಂದ ಪರಿಶುದ್ಧಾತ್ಮನಲ್ಲಿಯ ಬಾಪ್ತಿಸ್ಮವು ಎಫೆಸ 4:5ರ ಒಂದೇ ಬಾಪ್ತಿಸ್ಮ ಎಂದು ಕೆಲವರು ತಿಳಿಯುತ್ತಾರೆ. ಬ್ರೂನ್ನರ ಹೀಗೆ ಹೇಳಿದ್ದಾರೆ,

> ಈ ವಚನವು ಅನಂತರದ, ಎರಡನೆಯ ಹಾಗೂ ಬೇರೆಯಾದ, ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಎಂದು ಮಾತಾಡಲ್ಪಡಲಾಗುತ್ತಿದೆ ಎಂದು ವ್ಯಾಖ್ಯಾನಿಸಿದರೆ, ಕ್ರಿಸ್ತನಲ್ಲಿ ಬಾಪ್ತಿಸ್ಮ ದಾಟಿದ್ದಾಗಿದ್ದರೆ, ಕೆಲವು ಕ್ರೈಸ್ತರಿಗೆ ಮಾತ್ರ ಎಂದು ಹೇಳಿದರೆ, ಆಗ "ಎಲ್ಲಾ ... ಎಲ್ಲಾ" ಎಂಬ ಪಠ್ಯದ ಮಾತುಗಳಿಗೆ ಮಾತ್ರವೇ ಅಲ್ಲ - ಆದರೆ ಕೊರಿಂಥದವರ ಹಿನ್ನೆಲೆಯಲ್ಲಿರುವ ಅದರ ಮೂಲಪಾಠದ ಉದ್ದೇಶಕ್ಕೂ ಅಪರಾಧ ಮಾಡಿದಂತಾಗುತ್ತದೆ. ಕೊರಿಂಥದವರಿಗಿನ ಪೌಲನ ಸಂದೇಶದ

ಭಾರವು ಯೇಸು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದ ಎಲ್ಲರ ಐಕ್ಯತೆಯಾಗಿತ್ತು.[7]

ಬಾಪ್ತಿಸ್ಮದ ಆಳವಾದ ಅಧ್ಯಯನದ ನಂತರ, 1 ಕೊರಿಂಥ 12:13ರಲ್ಲಿ ಪೌಲನಿಂದ ನಮೂದಿಸಲ್ಪಟ್ಟ ಒಂದೇ ಬಾಪ್ತಿಸ್ಮದ ಬಗ್ಗೆ ಈ ಕೆಳಗಿನದು ಸ್ಪಷ್ಟವಾಗುತ್ತದೆ:

> ಎಲ್ಲಾ ವಿಶ್ವಾಸಿಗಳನ್ನು ಒಂದೇ ದೇಹದಲ್ಲಿ ಇಡುವದರಿಂದ ಅವರನ್ನು ಒಂದುಗೂಡಿಸುವದಕ್ಕಾಗಿ ಈ ಒಂದು ಬಾಪ್ತಿಸ್ಮವನ್ನು ಎಲ್ಲರೂ ಸ್ವೀಕರಿಸಿದ್ದಾರೆ ಎಂದು ಪೌಲನು ಹೇಳಿದನು. ಎಲ್ಲಾ ಕ್ರೈಸ್ತರು ಈ ಬಾಪ್ತಿಸ್ಮವನ್ನು ಸ್ವೀಕರಿಸಿದ್ದಾರೆ ಎಂಬುದು ಪೌಲನ ವಾದದ ಅರ್ಥವಾಗಿತ್ತು: ಆದದರಿಂದ ಎಲ್ಲರೂ ತಮ್ಮ ಕುಲ, ಹಿನ್ನೆಲೆ, ಇಲ್ಲವೇ ಸಮಾಜಿಕ ನಿಲುವು ಎಂಬುದರ ಬೇಧಭಾವವಿಲ್ಲದೆ ಒಂದು ದೇಹದಲ್ಲಿದ್ದಾರೆ. ವಿಶೇಷವಾದ ಕೆಲವರು ಮಾತ್ರವೇ ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಹೊಂದಿಕೊಂಡರೆ, ಆಗ ಒಬ್ಬನೇ ಆತ್ಮನಿಂದ ಎಲ್ಲರೂ ಬಾಪ್ತಿಸ್ಮ ಹೊಂಡಿಕೊಂಡಿರುವದಿಲ್ಲ ಮತ್ತು ಪೌಲನು ಬೋಧಿಸುತ್ತಿರುವ ಐಕ್ಯತೆಯೊಳಗೆ ತರಲ್ಪಟ್ಟಿರುವದಿಲ್ಲ.
>
> ಮಿತಿಯಲ್ಲಿ ಕೆಲವರು ಮಾತ್ರವೇ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಕೊಡಲ್ಪಟ್ಟಿರುವಾಗಾ, ಅಪೊಸ್ತಲರ ಕೃತ್ಯಗಳ ಗ್ರಂಥದ ಪ್ರಕಾರವಾಗಿ ಎಲ್ಲಾ ವಿಶ್ವಾಸಿಗಳಿಂದ ಅನುಭವಿಸಲ್ಪಟ್ಟ ಒಂದು ಬಾಪ್ತಿಸ್ಮವು ನೀರಿನ ಬಾಪ್ತಿಸ್ಮವಾಗಿದೆ, ಈ ಕಾರಣದಿಂದ 1 ಕೊರಿಂಥ 12:13ನ್ನು ನೀರಿನ ಬಾಪ್ತಿಸ್ಮದ ಮುಖಾಂತರ ಪರಿಶುದ್ಧಾತ್ಮನು ಎಲ್ಲಾ ವಿಶ್ವಾಸಿಗಳನ್ನು ಒಂದೇ ದೇಹದಲ್ಲಿ ತರುತ್ತಾನೆ ಎಂಬ ಅರ್ಥವನ್ನು ನಾವು ಒಪ್ಪಿಕೊಳ್ಳತಕ್ಕದು. ಒಂದೇ ದೇಹದೊಳಗೆ ಪರಿಶುದ್ಧಾತ್ಮನಿಂದ ಎಲ್ಲರೂ ಬಾಪ್ತಿಸ್ಮ ಹೊಂದಿದರು ಎಂದು ನಿರ್ಣಯಿಸಲಿಕ್ಕೆ ಅಪೊಸ್ತಲರ ಕೃತ್ಯಗಳ ಪುಸ್ತಕವು ಐತಿಹಾಸಿಕ ಪುರಾವೆಯನ್ನು ಲೆಕ್ಕಕ್ಕೆ ತೆಗೆದು ಕೊಳ್ಳುವದಿಲ್ಲ.[8]

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಹೊಸ ಒಡಂಬಡಿಕೆಯಲ್ಲಿ ಅದ್ಭುತಕರವಾದ ಬಲದೊಂದಿಗೆ ಮತ್ತು/ಇಲ್ಲವೇ ದೈವಿಕ ಪ್ರಕಟನೆಯೊಂದಿಗೆ ಸಂಬಂಧಿಸಿ ಹೇಳಲ್ಪಟ್ಟಿದೆ ಆದರೆ ವೈಯಕ್ತಿಕ ನೆಲೆಗೊಂಡಿರುವಿಕೆಯ ಬಗ್ಗೆ ಸಂಬಂಧಿಸಿರುವದಿಲ್ಲ. ಯೇಸು ತನ್ನ ಅಪೊಸ್ತಲರಿಗೆ ಅವರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದುವದನ್ನು ಕುರಿತು, "... ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:4). ಮತ್ತಾಯ 10:19, 20; ಯೋಹಾನ 14:17, 26; 15:26; 16:7-15; 20:22ರಲ್ಲಿ ದಾಖಲೆಯಾದ ಯೇಸುವು ತನ್ನ ಹೇಳಿಕೆಗಳಿಗೆ ಸಂಬಂಧಿಸಿ ಹೇಳುತ್ತಿದ್ದನು. ಈ ವಾಗ್ದಾನಗಳನ್ನು ಆತನು ಅಪೊಸ್ತಲರಿಗೆ ಮಾತ್ರ ಮಾಡಿದ್ದನು.

ಪರಿಶುದ್ಧಾತ್ಮನ ಬರುವಿಕೆಯಿಂದ ಎರಡು ವಾಗ್ದಾನಗಳು ಅಪೊಸ್ತಲರಿಗೆ ನೆರವೇರ ಬೇಕಾಗಿದ್ದವು; ಎಲ್ಲಾ ಸತ್ಯದಲ್ಲಿ ದೈವಿಯ ಮಾರ್ಗದರ್ಶನ (ಯೋಹಾನ 14:26; 16:13) ಮತ್ತು ಬಲ (ಅಪೊಸ್ತಲರ ಕೃತ್ಯಗಳು 1:8) ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಯಾವಾಗಲೂ ಇವುಗಳೊಂದಿಗೆ ಸಂಬಂಧಿಸಿದ್ದಾಗಿರ ಬೇಕಾಗಿತ್ತು. ಈ ಮಾರ್ಗದರ್ಶನವನ್ನು ಮತ್ತು ಬಲವನ್ನು ಒದಗಿಸಲಿಕ್ಕೆ ಪರಿಶುದ್ಧಾತ್ಮನ ಭಿನ್ನ ವರಗಳ ಕಾರ್ಯವು ಪರಿಶುದ್ಧಾತ್ಮನ ಚಿತ್ತದ ಮೇಲೆ ಒಳಗೊಂಡಿತ್ತು (1 ಕೊರಿಂಥ 12:11; ಇಬ್ರಿಯ 2:4). ಕೊರ್ನೇಲ್ಯ ಮತ್ತು ಅವನ ಮನೆಯವರು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದರೂ (ಅಪೊಸ್ತಲರ ಕೃತ್ಯಗಳು 11:15, 16) ಅಪೊಸ್ತಲರಂಥ ವರಗಳು

ಅವರಿಗೆ ಕೊಡಲ್ಪಟ್ಟಿರಲಿಲ್ಲ (ವಿಶೇಷ ವರಗಳು ಅಪೊಸ್ತಲತ್ವದ ಗುರುತುಗಳಂತೆ ಕೊಡಲ್ಪಟ್ಟಿದ್ದವು; 2 ಕೊರಿಂಥ 12:12). ಅಪೊಸ್ತಲರಂತೆ ಕೊರ್ನೇಲ್ಯನಾಗಲಿ ಮತ್ತು ಇತರರಾಗಲಿ ಎಲ್ಲಾ ಸತ್ಯಗಳೊಳಗೆ ನಡಿಸಲ್ಪಡಲಿಲ್ಲ.

**ಬೆಂಕಿಯಲ್ಲಿ ಬಾಪ್ತಿಸ್ಮವಲ್ಲ**

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮದೊಂದಿಗೆ ನಮೂದಿಸಲ್ಪಟ್ಟಿದ್ದರೂ ಬೆಂಕಿಯಲ್ಲಿ ಬಾಪ್ತಿಸ್ಮವು ಅವರೊಂದಿಗೆ ಸಂಬಂಧಿಸಲ್ಪಡಬಾರದು, ಬೆಂಕಿಯಲ್ಲಿ ಬಾಪ್ತಿಸ್ಮ ಹೊಂದುವವರು ಶಿಕ್ಷೆಯಾಗಿ ಬೆಂಕಿಯಲ್ಲಿ ಯೇಸುವು ಮುಳುಗಿಸುವವರು ಆಗಿರುವರು (ಮತ್ತಾಯ 312).

ಜಾಕ್ ಲೂವಿಸ್ ಹೀಗೆ ಹೇಳಿದ್ದಾರೆ,

> ಷಷ್ಠಿ ವಿಭಕ್ತಿಯಲ್ಲಿ ಉಪಸರ್ಗಾವ್ಯಯದ ಎರಡು ವಿಷಯಗಳ ತಳಹದಿಯ ಮೇಲೆ, ಎರಡು ವಿಷಯಗಳ ಒಂದೇ ಬಾಪ್ತಿಸ್ಮದ ಬಗ್ಗೆ ಯೋಹಾನನು ಮಾತಾಡುತ್ತಾನೆಂದು ಆಗಾಗ್ಗೆ ವಾದಿಸಲ್ಪಟ್ಟಿದೆ. ವ್ಯಾಕರಣವಾಗಿ, ವಾದಕ್ಕಾಗಿ ಏನನ್ನಾದರು ಹೇಳ ಬಹುದು, ಆದರೆ ಸನ್ನಿವೇಶವು ವ್ಯಕ್ತಪಡಿಸುವಿಕೆಯ ನಂತರ ಮತ್ತು ಮೊದಲು ಕೂಡಲೇ ಎರಡು ಗುಂಪುಗಳ ವಿರೋಧವನ್ನು ಮಾಡುತ್ತದೆ. ವಚನ 10ರಲ್ಲಿ "ಬೆಂಕಿ"ಯು ಫಲವಿಲ್ಲದ ಮರಗಳನ್ನು ಸುಡುವದಕ್ಕಾಗಿ ಮತ್ತು ವಚನ 12ರಲ್ಲಿ ಹೊಟ್ಟನ್ನು ಸುಡುವದಕ್ಕಾಗಿ ಇರುತ್ತದೆ - ಮಧ್ಯದಲ್ಲಿಯ ವ್ಯಕ್ತ ಪಡಿಸುವಿಕೆಯಲ್ಲಿ ಪದದ ಕೂಡಿಸುವಿಕೆಯು ಬದಲಾಯಿಸಲ್ಪಡುವುದು ಸಾಧ್ಯವಿಲ್ಲದ್ದರಿಂದ, ನರಕದ ಬೆಂಕಿ - ಬೆಂಕಿಯ ಕೆರೆ (ಪ್ರಕಟನೆ 20:15) ದೃಷ್ಟಿಕೋನದಲ್ಲಿದೆ. ಆಗ ಬೆಂಕಿಯು, ಇಲ್ಲಿ ನ್ಯಾಯ ತೀರ್ವಿಕೆಯ ಸಂಕೇತವಾಗಿದೆ, ಆದರೆ ಪರಿಶುದ್ಧಾತ್ಮ ನಾಗಿರುವದಿಲ್ಲ. ಪಂಚಾಶತ್ತಮ ದಿನದ ಬೆಂಕಿಯು, ಹೆಚ್ಚಾಗಿ ಈ ವಚನದೊಂದಿಗೆ ಸಂಬಂಧಿಸಲ್ಪಟ್ಟಿದೆ, ಮತ್ತು ಮೇಲೆ ಸೂಚಿಸಿದ ವ್ಯಾಖ್ಯಾನಕ್ಕೆ ಸಜೀವ ವಾದ ವ್ಯಾಖ್ಯಾನವಾಗಿದೆ. ಇದೊಂದು ಸಾಂಕೇತಿಕ ಹೋಲಿಕೆಯಾಗಿದೆ - "ಬೆಂಕಿಯಂತೆ ಉರಿಯುವ ನಾಲಿಗೆಗಳು" (ಅಪೊಸ್ತಲರ ಕೃತ್ಯಗಳು 2:3) - ಮತ್ತು ಬೆಂಕಿ ತಾನೇ ಆಗಿರುವದಿಲ್ಲ.[9]

ಬೆಂಕಿಯಲ್ಲಿ ಬಾಪ್ತಿಸ್ಮವನ್ನು ಅಪೇಕ್ಷಿಸುವ ಬದಲು, ಅದನ್ನು ತಪ್ಪಿಸಿಕೊಳ್ಳಲು ಹುಡುಕ ಬೇಕು. ಸಾಮಾನ್ಯವಾಗಿ "ಬೆಂಕಿ"ಯು ದಂಡನೆಯನ್ನು ಸೂಚಿಸುತ್ತದೆ (ಮತ್ತಾಯ 3:10; 5:22; 7:19; 13:40, 42, 50; 18:8, 9; 25:41). ಯೇಸು ಅಪೊಸ್ತಲರಿಗೆ ಅವರು "ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ ಹೊಂದುವರು" ಎಂದು ಹೇಳಿ ದಾಗ (ಅಪೊಸ್ತಲರ ಕೃತ್ಯಗಳು 1:5), ಆಗ "ಬೆಂಕಿಯೊಂದಿಗೆ" ಎಂಬುದನ್ನು ಕೂಡಿಸಲಿಲ್ಲ. ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವನ್ನು ಕುರಿತು ಯೇಸು ಹೇಳಿದ್ದನ್ನು ಜ್ಞಾಪಿಸಿಕೊಂಡಾಗ ಪೇತ್ರನು "ಬೆಂಕಿ" ಎಂಬುದನ್ನು ಕೂಡಿಸಲಿಲ್ಲ (ಅಪೊಸ್ತಲರ ಕೃತ್ಯಗಳು 11:15, 16). ಪರಿಶುದ್ಧಾತ್ಮ ಬಾಪ್ತಿಸ್ಮದೊಂದಿಗೆ ಇಲ್ಲವೇ ಎಫೆಸ 4:5ರ "ಒಂದೇ ಬಾಪ್ತಿಸ್ಮ"ದೊಂದಿಗೆ ಬೆಂಕಿಯನ್ನು ಸಂಬಂಧಿಸಬಾರದು.

**ನೀರಿನಲ್ಲಿ ಬಾಪ್ತಿಸ್ಮ**

ಒಂದು ವಾಕ್ಯದಲ್ಲಿ ಮನುಷ್ಯನಿಂದ ಮಾಡಲ್ಪಟ್ಟ ಬಾಪ್ತಿಸ್ಮವು ನೀರಿನಲ್ಲಿಯ ಬಾಪ್ತಿಸ್ಮ ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ದೇವರಿಂದ ಕೊಡಲ್ಪಟ್ಟ ಬಾಪ್ತಿಸ್ಮವು ಪರಿಶುದ್ಧಾತ್ಮನಲ್ಲಿಯ ಬಾಪ್ತಿಸ್ಮವಾಗಿರುತ್ತದೆ. "ಬಾಪ್ತಿಸ್ಮ" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಕಾಣುವಾಗ, ಅದು ಬೇರೆ ಮಾತುಗಳಿಂದ ವರ್ಣಿಸಲ್ಪಡದಿದ್ದರೆ

ನೀರಿನಲ್ಲಿ ಬಾಪ್ತಿಸ್ಮವಾಗಿರುತ್ತದೆ.

Albrecht Oepke, ಈ ವಿಷಯವನ್ನು "ಬಾಪ್ತಿಸ್ಮ" ಎಂಬ ತನ್ನ ವಿವರಣೆಯಲ್ಲಿ ಕೂಡಿಸಿದ್ದಾನೆ. "... ಹೊಸ ಒಡಂಬಡಿಕೆಯ ಬಾಪ್ತಿಸ್ಮಕ್ಕೆ ಉಲ್ಲೇಖವು ಹಿನ್ನೆಲೆಯು ಬೇರೆಯದನ್ನು ಸೂಚಿಸದಿದ್ದರೆ ನೀರಿನಲ್ಲಿ ಬಾಪ್ತಿಸ್ಮ ಎಂದು ಯೋಚಿಸತಕ್ಕದ್ದು. ಬಾಪ್ತಿಸ್ಮ ಅಂದರೆ ಯಾಂತ್ರಿಕವಾಗಿ 'ನೀರಿನಲ್ಲಿ ಬಾಪ್ತಿಸ್ಮ ಮಾಡಿಸು' ಎಂದರ್ಥವಾಗುತ್ತದೆ. ಆದುದರಿಂದ ಮಧ್ಯಮವಾದದ್ದನ್ನು ವಿವರಿಸುವುದು ಅನಾವಶ್ಯಕವಾದದ್ದಾಗಿದೆ."[10]

"ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಮತ್ತು ನೀರಿನಲ್ಲಿ ಬಾಪ್ತಿಸ್ಮ - ಒಂದು ಹೋಲಿಕೆ" ನೋಡಿರಿ. ಅದು ನೀರಿನ ಬಾಪ್ತಿಸ್ಮವನ್ನು ಪರಿಶುದ್ಧಾತ್ಮನ ಬಾಪ್ತಿಸ್ಮದೊಂದಿಗೆ ಹೋಲಿಸುತ್ತದೆ. ಚಾರ್ಟಿನಲ್ಲಿ ಇರುವ ಹೆಚ್ಚಾದ ಮಾಹಿತಿಯು ಅರ್ಥ ಮಾಡಿಕೊಳ್ಳಲು ಸುಲಭವಾಗಿದೆ ಹಾಗೂ ವಿವರಣೆಯ ಅಗತ್ಯತೆಯಿರುವದಿಲ್ಲ. ಹಾಗಿದ್ದರೂ, ಪರಿಣಾಮದ ಬಗ್ಗೆ ಸ್ವಲ್ಪ ಹೆಚ್ಚು ಹೇಳ ಬೇಕಾಗುತ್ತದೆ (ಯಾದಿಯಲ್ಲಿ 10ನ್ನು ನೋಡಿರಿ). ಅನ್ಯ ಜನರಾಗಲೀ ಮತ್ತು ಯೆಹೂದಿ ಕ್ರೈಸ್ತರಾಗಲಿ ಪರಿಶುದ್ಧಾತ್ಮನಲ್ಲಿಯೇ ಬಾಪ್ತಿಸ್ಮದ ಮುಖಾಂತರ ಅಪೊಸ್ತಲರಾಗಲೀ ಇಲ್ಲವೇ ದೇವರ ಮಕ್ಕಳಾಗಲೀ ಆಗಲಿಲ್ಲ. ಅದೇ ರೀತಿಯಲ್ಲಿ ಮಾರ್ಪಾಟು ಹೊಂದಿದವರು ಯಾವಾಗಲೂ ನೀರಿನಿಂದಲೂ ಆತ್ಮನಿಂದಲೂ ಹುಟ್ಟುವದರಿಂದ ದೇವರ ಮಕ್ಕಳಾ ಗುವರು (ಯೋಹಾನ 3:5; ರೋಮಾಪುರ 6:4; ಗಲಾತ್ಯ 3:26, 27; ಕೊಲೊಸ್ಸೆ 2:12, 13).

## ಮುಕ್ತಾಯ

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಯೇಸುವಿನಿಂದ ಅಪೊಸ್ತಲರಿಗೆ ಅವರನ್ನು ತನ್ನ ವಿಶೇಷ ಪ್ರತಿನಿಧಿಯಾಗಿರಲು ಸಿದ್ಧಪಡಿಸುವದಕ್ಕೆ ಮಾಡಿಸಲ್ಪಟ್ಟಿತು. ಈ ಬಾಪ್ತಿಸ್ಮಕ್ಕೆ ಸಂಬಂಧಿಸಿ, ಕ್ರಿಸ್ತನು ಅವರಿಗೆ ತನ್ನ ವಾಕ್ಯವನ್ನು ಪ್ರಕಟಿಸಿದನು ಮತ್ತು ಅವರನ್ನು ತನ್ನ ಅಪೊಸ್ತಲರನ್ನಾಗಿ ಪ್ರತ್ಯೇಕವಾಗಿಡಲು ಬಲದಿಂದ ತುಂಬಿಸಿದನು (2 ಕೊರಿಂಥ 12:12). ಅನ್ಯಜನರಿಗೆ ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು, ಮೊದಲು ಅಪೊಸ್ತಲರಿಗೆ ಮಾತ್ರ ಕೊಟ್ಟಿದ್ದನ್ನು ಕೊಡುವದರಿಂದ ಕ್ರಿಸ್ತನು ರಾಜ್ಯದಲ್ಲಿ ಪ್ರಥಮ ವರ್ಗದ ಕ್ರೈಸ್ತರಾಗ ಬಹುದೆಂದು ಸಿದ್ಧಪಡಿಸಿ ತೋರಿಸಿತು. ಪರಿಶುದ್ಧಾತ್ಮನಲ್ಲಿಯ ಬಾಪ್ತಿಸ್ಮವು ಅನ್ಯಜನರನ್ನು ಮೇಲಕ್ಕೆತ್ತಲು ಮತ್ತು ಈ ದೂರಹೋಗಿದ್ದ ಎರಡು ಗುಂಪುಗಳನ್ನು - ಯೆಹೂದ್ಯರನ್ನು ಮತ್ತು ಅನ್ಯಜನರನ್ನು - ಕ್ರಿಸ್ತನ ಸಭೆಯಲ್ಲಿ ಸರಿಸಮಾನವಾದ ಸ್ಥಾನಕ್ಕೆ ತರಲು ದೇವರ ಉದ್ದೇಶವನ್ನು ನೆರವೇರಿಸಿತು (ಎಫೆಸ 2:11-16). ಅಪೊಸ್ತಲರಿಗೆ ಮಾತ್ರವೇ ಕೊಡಲ್ಪಟ್ಟಿದ್ದ ಬಾಪ್ತಿಸ್ಮವನ್ನೇ ಮೊದಲು ಅನ್ಯಜರಿಗೆ ಕೊಡುವದರಿಂದ ದೇವರು ಪಕ್ಷಪಾತಿಯಲ್ಲ ಎಂಬುದನ್ನು ತೋರಿಸಿದನು. ಈ ಉದ್ದೇಶಗಳನ್ನು ನೆರವೇರಿಸಿದ್ದರಿಂದ, ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಬೇರೆ ಯಾರಿಗೂ ಅಗತ್ಯವಾಗಿರಲಿಲ್ಲ ಮತ್ತು ಹೀಗೆ ಆ ಸಮಯದಿಂದ ಬೇರೆ ಯಾರಿಗೂ ಕೊಡಲ್ಪಟ್ಟಿರುವದಿಲ್ಲ.

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಒಂದು ವಿಶೇಷ ಉದ್ದೇಶಕ್ಕಾಗಿ ಇದ್ದುದರಿಂದ, ಈ ಬಾಪ್ತಿಸ್ಮವನ್ನು ಕೆಲವರು ಮಾತ್ರವೇ ಹೊಂದಿದರು. ಇಂದು ಎಲ್ಲಾ ಕ್ರೈಸ್ತರೂ ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಹೊಂದಿಕೊಂಡರೆ, ಅವರಿಗೆ ಅಪೊಸ್ತಲರಿಗಿದ್ದಂತೆ ಅದ್ಭುತ ಮಾಡುವ ವರಗಳಿರುತ್ತಿದ್ದವು. ಇಲ್ಲದಿದ್ದರೆ, ಅನ್ಯರಿಂದ ಮೊದಲು ಮಾರ್ಪಟ್ಟವರಲ್ಲಿದ್ದಂತೆ, ಅವರನ್ನು ವಿಶೇಷವಾಗಿ ದೇವರು ಆಯ್ದುಕೊಂಡಿದ್ದನ್ನು ತಿಳಿಸುವ ಉದ್ದೇಶಕ್ಕಾಗಿ ಅವರು ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿ ಕೊಳ್ಳುತ್ತಿದ್ದರು. ಹೊಸ ಒಡಂಬಡಿಕೆಯ

ಸಂಗತಿಗಳಲ್ಲಿ ಈ ಸನ್ನಿವೇಶಗಳು ಅವಶ್ಯವಾಗಿದ್ದರೆ, ಇಂದು ಅವುಗಳ ಅವಶ್ಯಕತೆ ಯಾಕೆ ಇರುವದಿಲ್ಲ?

ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವು ಹುಡುಕಲ್ಪಡಲಿಲ್ಲ, ಪ್ರಾರ್ಥನೆ ಮಾಡಲ್ಪಡಲಿಲ್ಲ ಇಲ್ಲವೇ ಮಾನವ ಪ್ರಯತ್ನದಿಂದ ದೊರಕಿಸಲ್ಪಡಲಿಲ್ಲ. ದೇವರು ತನ್ನ ಸ್ವಂತ ದೈವಿಕ ಉದ್ದೇಶಗಳನ್ನು ಸಾಧಿಸಲು ತನ್ನ ಸ್ವಂತ ಇಚ್ಛೆಯ ಪ್ರಕಾರ ಅದನ್ನು ದೇವರು ಕೊಟ್ಟಿದ್ದಾನೆ. ಜನರು ಇಂದು ಈ ಬಾಪ್ತಿಸ್ಮವನ್ನು ಹುಡುಕುತ್ತಿರುವವರು ಆಜ್ಞಾಪಿಸಲ್ಪಡದೇ ಇರುವಂಥದ್ದನ್ನು ಇಲ್ಲವೇ ಅವರಿಗಾಗಿ ವಾಗ್ದಾನ ಮಾಡದೇ ಇದ್ದುದನ್ನು ದೊರಕಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. (ಪೌಲನನ್ನು ಬಿಟ್ಟು) ಪರಿಶುದ್ಧ ಬರಹವು ಕೇವಲ ಎರಡು ಉದಾಹರಣೆಗಳನ್ನು ಪ್ರಕಟಿಸಿರುವ ಸಂಗತಿಯು ಅಂಥ ಬಾಪ್ತಿಸ್ಮವು ಎಲ್ಲಾ ಜನರಿಗಾಗಿರುವ ಇಲ್ಲವೇ ಎಲ್ಲಾ ಸಮಯಗಳಿಗಾಗಿರುವ ಬಾಪ್ತಿಸ್ಮವಲ್ಲ ಎಂದು ನಾವು ತಿಳಿಯುವದಕ್ಕೆ ಕಾರಣವಾಗಿದೆ.

---

ಟಿಪ್ಪಣಿಗಳು

[1]ಪರಿಶುದ್ಧಾತ್ಮನನ್ನು ಒಳಗೊಂಡಿರುವ ಎರಡು ಬಾಪ್ತಿಸ್ಮಗಳಿರುವವೆಂದು ಕೆಲವರು ವಾದಿಸುತ್ತಾರೆ: "ಪರಿಶುದ್ಧಾತ್ಮನ ಬಾಪ್ತಿಸ್ಮ" ಮತ್ತು "ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ" ಅಂಥ ಬೋಧನೆಯು ಸರಿಯಾಗಿರಲಾರದು. *En* ಎಂಬ ಗ್ರೀಕ ಪದವು ಮತ್ತಾಯ 3:6 ಮತ್ತು 3:11ರಲ್ಲಿ "with" ಎಂದು ಭಾಷಾಂತರಿಸಲ್ಪಟ್ಟದ್ದು "in" ಎಂದು ಚೆನ್ನಾಗಿ ಭಾಷಾಂತರಿಸಲ್ಪಡ ಬಹುದು, ಆದರೆ "with" ಇಲ್ಲವೇ "by" ಎಂದು ಸರಿಯಾಗಿ ಭಾಷಾಂತರಿಸಲ್ಪಡಬಹುದು. ಈ ವಾಕ್ಯಗಳಲ್ಲಿ ಪರಿಶುದ್ಧಾತ್ಮನನ್ನು ಒಳಗೊಂಡ ಎರಡು ಪ್ರತ್ಯೇಕ ಬಾಪ್ತಿಸ್ಮಗಳು ಇವೆಯೆಂದು ಬೋಧಿಸಲ್ಪಟ್ಟಿರುವದಿಲ್ಲ. [2]ಪೌಲನೂ ಸಹ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಹೊಂದಿದನೆಂದು ಯೋಗ್ಯವಾಗಿ ಊಹಿಸ ಬಹುದು, ಆದರೆ ನಿರ್ದಿಷ್ಟವಾಗಿ ಸಿದ್ಧಪಡಿಸಿ ತೋರಿಸಲಾರೆವು. ಆತ್ಮನಲ್ಲಿ ಪೌಲನ ಬಾಪ್ತಿಸ್ಮವು 2 ಕೊರಿಂಥ 12:11ರಲ್ಲಿಯ ಅವನ ಹೇಳಿಕೆಯಿಂದ ಸೂಚಿಸಲ್ಪಡ ಬಹುದು. "... ಅತಿ ಶ್ರೇಷ್ಠರಾದ ಅಪೊಸ್ತಲರು ಅನ್ನಿಸಿಕೊಳ್ಳುವ ಆ ಜನರಿಗಿಂತ ಒಂದರಲ್ಲಿಯಾದರೂ ಕಡಿಮೆಯಾಗಲಿಲ್ಲ ..." ಹಾಗಿದ್ದರೆ ಆ ಬಾಪ್ತಿಸ್ಮ ಸ್ವೀಕರಿಸಿದ ಕೇವಲ ಇನ್ನೊಬ್ಬ ವ್ಯಕ್ತಿ ಅವನಾಗಿದ್ದನು. [3]G. R. Beasley-Murray, *Baptism in the New Testament* (Grand Rapids, Mich.: Wm. B. Eerdmans Publishing Co., 1977), 108. [4]ಹೊಸ ಒಡಂಬಡಿಕೆಯ ಸಭೆಯಲ್ಲಿ ಇದ್ದಂತೆ, ಇಂದು ಪರಿಶುದ್ಧಾತ್ಮನನ್ನು ಸ್ವೀಕರಿಸಲಿಕ್ಕೆ ಸಾಮಾನ್ಯವಾದ ಮಾರ್ಗವು ಪಾಪಗಳ ಕ್ಷಮಾಪಣೆಗಾಗಿ (ಅಪೊಸ್ತಲರ ಕೃತ್ಯಗಳು 2:38) ಬಾಪ್ತಿಸ್ಮದ ಮುಖಾಂತರ ದೇವರ ಮಗುವಾಗುವುದು (ಗಲಾತ್ಯ 3:26, 27). [5]Gareth L. Reese, *New Testament History, Acts* (Joplin, Mo.: College Press, 1988), 404. [6]Frederick Dale Bruner, *A Theology of the Holy Spirit* (Grand Rapids, Mich.: Wm. B. Eerdmans Publishing Co., 1970), 194. [7]Ibid., 292. [8]Owen D. Olbricht, *Baptism*: *New Birth or Empty Ritual?* (Delight, Ark.: Gospel Light Publishing Co., 1994), 108-9. [9]Jack Lewis, *The Gospel According to Matthew,* Part 1, The Living Word Commentary, ed. Everett Ferguson (Austin, Tex.: Sweet Publishing Co., 1976), 63. [10]Albrecht Oepke, *"Bapto, baptizo," Theological Dictionary of the New Testament,* ed. Gerhard Kittel, trans. Geoffrey W. Bromiley, vol. 1 (Grand Rapids, Mich.: Wm. B. Eerdmans Publishing Co., 1964), 539.

© 2009 Truth for Today

# ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ ಮತ್ತು ನೀರಿನಲ್ಲಿ ಬಾಪ್ತಿಸ್ಮ ಒಂದು ಹೋಲಿಕೆ

| | ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮ | | ನೀರಿನಲ್ಲಿ ಬಾಪ್ತಿಸ್ಮ |
|---|---|---|---|
| 1. | ಯೇಸುವಿನಿಂದ ಮಾಡಲ್ಪಟ್ಟಿತು (ಮತ್ತಾಯ 3:11) | 1. | ಮನುಷ್ಯನಿಂದ ಮಾಡಿಸಲ್ಪಟ್ಟಿತು (ಮತ್ತಾಯ 28:19) |
| 2. | ತಂದೆಯ ಬಳಿಯಿಂದ ಯೇಸುವಿನಿಂದ ಕಳುಹಿಸಲ್ಪಟ್ಟನು, ಮತ್ತು ಆತ್ಮನಲ್ಲಿ ಮುಳುಗೇಳಿಸಲ್ಪಡಲು ಸುರಿಸಲ್ಪಟ್ಟನು (ಯೋಹಾನ 15:26; 16:7; ಅಪೊಸ್ತಲರ ಕೃತ್ಯಗಳು 10:45) | 2. | ನೀರಿನಲ್ಲಿ ಮುಳುಗೇಳಿಸಲ್ಪಡುವುದು (ರೋಮಾಪುರ 6:4; ಕೊಲಸ್ಸೆ 2:12) |
| 3. | ಯೇಸುವಿನ ಹೆಸರಿನಲ್ಲಿ ತಂದೆಯಿಂದ ಕಳುಹಿಸಲ್ಪಟ್ಟನು (ಯೋಹಾನ 14:26) | 3. | ತಂದೆ, ಕುಮಾರ ಮತ್ತು ಪರಿಶುದ್ಧಾತ್ಮಾನ ಹೆಸರಿನಲ್ಲಿ ಮನುಷ್ಯನಿಂದ ಮಾಡಲ್ಪಟ್ಟಿತು (ಮತ್ತಾಯ 28:19) |
| 4. | ಯೆರೂಸಲೇಮಿನಲ್ಲಿ ಕಾದುಕೊಂಡಿದ್ದವರ ಮೇಲೆ ಮತ್ತು ಸಂಶಯಪಡದ ಅನ್ಯರ ಮೇಲೆ ದೇವರಿಂದ ನೇರವಾಗಿ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 1:4, 5; 10:44) | 4. | ನಂಬಿ, ಮಾನಸಾಂತರ ಪಡುವವರಿಗೆ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:38; 8:12; 18:18) |
| 5. | ಒಂದು ವಾಗ್ದಾನದಂತೆ ಸ್ವೀಕರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 1:4, 5) | 5. | ಒಂದು ಆಜ್ಞೆಯಂತೆ ಕೇಳಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 10:48) |
| 6. | ಅಪೊಸ್ತಲರಿಗಾಗಿ (ಅಪೊಸ್ತಲರ ಕೃತ್ಯಗಳು 1:1-5) | 6. | ಎಲ್ಲಾ ಜನಾಂಗಗಳಿಗಾಗಿ (ಮತ್ತಾಯ 28:19) |
| 7. | ಅಪೊಸ್ತಲರಿಂದ ಸ್ವೀಕರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 1:26-2:4) ಮತ್ತು ಮೊದಲ ಮಾರ್ಪಾಟು ಹೊಂದಿದ ಅನ್ಯರಿಂದ ಸ್ವೀಕರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 11:15, 16) | 7. | ಎಲ್ಲಾ ಕಡೆಗಳಲ್ಲಿರುವ ಎಲ್ಲಾ ವಿಶ್ವಾಸಿಗಳಿಂದ ಸ್ವೀಕರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:41; 8:12, 13, 38, 39; 10:48; 18:8; 19:5) |
| 8. | ಉದ್ದೇಶಗಳು ಯೇಸುವಿನ ಬೋಧನೆಯನ್ನು ಪ್ರಕಟಿಸುವುದು (ಯೋಹಾನ 14:26), ಬಲವನ್ನು ಕೊಡುವುದು (ಅಪೊಸ್ತಲರ ಕೃತ್ಯಗಳು 1:8), ಮತ್ತು ಅನ್ಯರಿಗಾಗಿ ಬಾಗಿಲನ್ನು ತೆರೆಯುವುದು (ಅಪೊಸ್ತಲರ ಕೃತ್ಯಗಳು 10:47; 11:17; 15:7-9) | 8. | ಉದ್ದೇಶವು ಪಾಪಗಳ ಕ್ಷಮಾಪಣೆಯಾಗಿತ್ತು (ಅಪೊಸ್ತಲರ ಕೃತ್ಯಗಳು 2:38; 22:16; ಕೊಲೊಸ್ಸೆ 2:12, 13) |
| 9. | ಆತ್ಮನಲ್ಲಿ ಬಾಪ್ತಿಸ್ಮ ಹೊಂದಿದವರು ನಾನಾ ಭಾಷೆಗಳಲ್ಲಿ ಮಾತಾಡಿದರು (ಅಪೊಸ್ತಲರ ಕೃತ್ಯಗಳು 2:4; 10:44-46) | 9. | ನೀರಿನಲ್ಲಿ ಬಾಪ್ತಿಸ್ಮ ಹೊಂದಿದವರು ಸಂತೋಷ ಪಟ್ಟರು (ಅಪೊಸ್ತಲರ ಕೃತ್ಯಗಳು 8:39; 16:33, 34) |
| 10. | ಅಪೊಸ್ತಲರ ಸಂಕೇತಗಳು ಪರಿಣಾಮವಾಗಿತ್ತು (2 ಕೊರಿಂಥ 12:12); ಅನ್ಯರಿಗಾಗಿ ರಕ್ಷಣೆಯ ದೇವರು ಅಯ್ಕೆಯು ಪ್ರಕಟಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 15:7-9) | 10. | ದೇವರ ಮಕ್ಕಳಾಗುವುದು ಪರಿಣಾಮವಾಗಿತ್ತು (ಗಲಾತ್ಯ 3:26, 27) |


© 2009 Truth for Today